www.prepp.in

Prepp
Your Personal Exams Guide

Language Code : **07**

इस पुस्तिका में **20** मुद्रित पृष्ठ हैं।
This booklet contains **20** Printed pages.

# SAS-24-I

**प्रश्न-पत्र-I / PAPER-I**
**कन्नड़ भाषा परिशिष्ट**
**Kannada Language Supplement**
**भाग-IV & V / PART-IV & V**

**मुख्य परीक्षा पुस्तिका संख्या / Main Test Booklet No.**

**इस परीक्षा पुस्तिका को तब तक न खोलें जब तक कहा न जाए।**
**Do not open this Test Booklet until you are asked to do so.**
**इस परीक्षा पुस्तिका के पिछले आवरण (पृष्ठ 19 व 20) पर दिए निर्देशों को ध्यान से पढ़ें।**
**Read carefully the Instructions on the Back Cover (Page 19 & 20) of this Test Booklet.**

**मुख्य परीक्षा पुस्तिका कोड / Main Test Booklet Code**
**J**

**कन्नड़ में निर्देशों के लिए इस पुस्तिका का पृष्ठ 2 देखें। / FOR INSTRUCTIONS IN KANNADA SEE PAGE 2 OF THIS BOOKLET.**

## परीक्षार्थियों के लिए निर्देश

1. यह पुस्तिका मुख्य परीक्षा पुस्तिका की एक परिशिष्ट है, उन परीक्षार्थियों के लिए जो **या** तो भाग IV (भाषा I) **या** भाग V (भाषा II) **कन्नड़** भाषा में देना चाहते हैं, लेकिन **दोनों नहीं**।
2. परीक्षार्थी भाग I एवं भाग II **या** III के उत्तर मुख्य परीक्षा पुस्तिका से दें और भाग IV व V के उत्तर उनके द्वारा चुनी भाषाओं से।
3. अंग्रेज़ी व हिन्दी भाषा पर प्रश्न मुख्य परीक्षा पुस्तिका में भाग IV व भाग V के अन्तर्गत दिए गए हैं। भाषा परिशिष्टों को आप अलग से माँग सकते हैं।
4. इस पृष्ठ पर विवरण अंकित करने एवं उत्तर पत्र पर निशान लगाने के लिए **केवल काले/नीले बॉल पॉइंट पेन** का प्रयोग करें।
5. इस भाषा पुस्तिका का **संकेत** है **J**। यह सुनिश्चित कर लें कि इस भाषा परिशिष्ट पुस्तिका का संकेत, उत्तर पत्र के **पृष्ठ-2** एवं मुख्य परीक्षा पुस्तिका पर छपे संकेत से मिलता है। अगर यह भिन्न हो, तो परीक्षार्थी दूसरी भाषा परिशिष्ट परीक्षा पुस्तिका लेने के लिए निरीक्षक को तुरन्त अवगत कराएँ।
6. इस परीक्षा पुस्तिका में **दो** भाग IV और V हैं, जिनमें **60** वस्तुनिष्ठ प्रश्न हैं, जो प्रत्येक 1 अंक का है :
   भाग-IV : भाषा-I (कन्नड़) (प्र. 91 से प्र. 120)
   भाग-V : भाषा-II (कन्नड़) (प्र. 121 से प्र. 150)
7. भाग-IV में भाषा-I के लिए 30 प्रश्न और भाग-V में भाषा-II के लिए 30 प्रश्न दिए गए हैं। इस परीक्षा पुस्तिका में केवल कन्नड़ भाषा से संबंधित प्रश्न दिए गए हैं। **यदि भाषा-I और/या भाषा-II में आपके द्वारा चुनी गई भाषा(एँ) कन्नड़ के अलावा है तो कृपया उस भाषा वाली परीक्षा पुस्तिका माँग लीजिए। जिन भाषाओं के प्रश्नों के उत्तर आप दे रहे हैं वह आवेदन पत्र में चुनी गई भाषाओं से अवश्य मेल खानी चाहिए।**
8. **परीक्षार्थी भाग-V (भाषा-II) के लिए, भाषा सूची से ऐसी भाषा चुनें जो उनके द्वारा भाषा-I (भाग-IV) में चुनी गई भाषा से भिन्न हो।**
9. रफ कार्य परीक्षा पुस्तिका में इस प्रयोजन के लिए दी गई खाली जगह पर ही करें।
10. सभी उत्तर केवल OMR उत्तर पत्र पर ही अंकित करें। अपने उत्तर ध्यानपूर्वक अंकित करें। उत्तर बदलने हेतु श्वेत रंजक का प्रयोग निषिद्ध है।

## INSTRUCTIONS FOR CANDIDATES

1. This booklet is a supplement to the Main Test Booklet for those candidates who wish to answer **EITHER** Part IV (Language I) **OR** Part V (Language II) in **KANNADA** language, but **NOT BOTH**.
2. Candidates are required to answer Part I and Part II **OR** III from the Main Test Booklet and Parts IV and V from the languages chosen by them.
3. Questions on English and Hindi languages for Part IV and Part V have been given in the Main Test Booklet. Language Supplements can be asked for separately.
4. Use **Black/Blue Ball Point Pen only** for writing particulars on this page/marking responses in the Answer Sheet.
5. The CODE for this Language Booklet is **J**. Make sure that the CODE printed on **Side-2** of the Answer Sheet and on your Main Test Booklet is the same as that on this Language Supplement Test Booklet. In case of discrepancy, the candidate should immediately report the matter to the Invigilator for replacement of the Language Supplement Test Booklet.
6. This Test Booklet has **two** Parts, IV and V, consisting of **60** Objective Type Questions, each carrying 1 mark :
   Part-IV : Language-I (Kannada) (Q. 91 to Q. 120)
   Part-V : Language-II (Kannada) (Q. 121 to Q. 150)
7. Part-IV contains 30 questions for Language-I and Part-V contains 30 questions for Language-II. In this Test Booklet, only questions pertaining to Kannada language have been given. **In case the language/s you have opted for as Language-I and/or Language-II is a Language other than Kannada, please ask for a Test Booklet that contains questions on that language. The language being answered must tally with the languages opted for in your Application Form.**
8. **Candidates are required to attempt questions in Part-V (Language-II) in a language other than the one chosen as Language-I (in Part-IV) from the list of languages.**
9. Rough work should be done only in the space provided in the Test Booklet for the same.
10. The answers are to be recorded on the OMR Answer Sheet only. Mark your responses carefully. No whitener is allowed for changing answers.

परीक्षार्थी का नाम (बड़े अक्षरों में) : ____________________
Name of the Candidate (in Capitals) :

अनुक्रमांक : (अंकों में) / Roll Number : in figures ____________________
: शब्दों में / in words ____________________

परीक्षा केन्द्र (बड़े अक्षरों में) : ____________________
Centre of Examination (in Capitals) :

परीक्षार्थी के हस्ताक्षर : ____________________
Candidate's Signature :

निरीक्षक के हस्ताक्षर : ____________________
Invigilator's Signature :

Facsimile Signature Stamp of
Centre Superintendent : ____________________

www.prepp.in

Prepp
Your Personal Exams Guide

Language Code : **07**

# SAS-24-I

**ಪ್ರಶ್ನೆ ಪತ್ರಿಕೆ–I**

**ಕನ್ನಡ ಭಾಷಾ ಪೂರಕ**

**ಭಾಗ IV ಮತ್ತು V**

**ಪ್ರಶ್ನೆ ಪುಸ್ತಿಕೆ ಸಂಕೇತ**

**J**

**ಈ ಪ್ರಶ್ನೆ ಪುಸ್ತಿಕೆ 20 ಪುಟಗಳನ್ನು ಹೊಂದಿರುತ್ತದೆ.**

**ಈ ಪ್ರಶ್ನೆ ಪುಸ್ತಿಕೆಯನ್ನು ತೆರೆಯುವಂತೆ ಹೇಳುವವರೆಗೆ ಯಾರೂ ತೆರೆಯಬಾರದು.**

**ಈ ಪ್ರಶ್ನೆ ಪುಸ್ತಿಕೆಯ ಹಿಂದಿನ ಪುಟದಲ್ಲಿ ಕೊಟ್ಟಿರುವ ಸೂಚನೆಗಳನ್ನು (ಪುಟ 19 ಮತ್ತು 20) ಗಮನವಿಟ್ಟು ಓದಿರಿ.**

**ಪರೀಕ್ಷಾರ್ಥಿಗಳಿಗೆ ಸೂಚನೆಗಳು :**

1. ಈ ಪ್ರಶ್ನೆ ಪತ್ರಿಕೆಯು ಮುಖ್ಯ ಪ್ರಶ್ನೆ ಪುಸ್ತಿಕೆಯ ಪೂರಕ ಪತ್ರಿಕೆಯಾಗಿದ್ದು, ಇದು ಭಾಗ IV (ಭಾಷೆ I) **ಅಥವಾ** ಭಾಗ V (ಭಾಷೆ II)ನ್ನು **ಕನ್ನಡ** ಭಾಷೆಯಲ್ಲಿ ಉತ್ತರಿಸಲು ಆಯ್ದುಕೊಂಡ ಅಭ್ಯರ್ಥಿಗಳಿಗೆ ಅನ್ವಯವಾಗುತ್ತದೆ. ಅಭ್ಯರ್ಥಿಗಳು ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳಬಹುದು **ಎರಡನ್ನೂ ಅಲ್ಲ.**
2. ಅಭ್ಯರ್ಥಿಗಳು ಮುಖ್ಯ ಪ್ರಶ್ನೆ ಪುಸ್ತಿಕೆಯ ಭಾಗ I, II ಮತ್ತು III ನ್ನು ಅವಶ್ಯಕವಾಗಿ ಉತ್ತರಿಸಬೇಕು ಮತ್ತು ಪೂರಕ ಪ್ರಶ್ನೆ ಪುಸ್ತಿಕೆಯಿಂದ ಭಾಗ IV ಮತ್ತು V ರ ಉತ್ತರವನ್ನು ತಾವು ಆಯ್ದುಕೊಂಡ ಭಾಷೆಯಲ್ಲಿ ಉತ್ತರಿಸಬೇಕು.
3. ಭಾಗ IV ಮತ್ತು ಭಾಗ V ರ ಇಂಗ್ಲಿಷ್ ಮತ್ತು ಹಿಂದಿ ಭಾಷೆಯ ಪ್ರಶ್ನೆಗಳನ್ನು ಮುಖ್ಯ ಪ್ರಶ್ನೆ ಪುಸ್ತಿಕೆಯಲ್ಲೇ ಕೊಡಲಾಗಿದೆ. ಇತರ ಪೂರಕ ಭಾಷೆಯ ಪುಸ್ತಿಕೆಯನ್ನು ಬೇರೆಯಾಗಿ ಕೇಳಿ ಪಡೆಯಬಹುದು.
4. ಈ ಪುಟದಲ್ಲಿ ವಿವರ ಬರೆಯಲು ಮತ್ತು ಉತ್ತರ ಪತ್ರಿಕೆಯಲ್ಲಿ ಗುರುತು ಮಾಡಲು **ಕೇವಲ ಕಪ್ಪು/ನೀಲಿ ಬಾಲ್ ಪಾಯಿಂಟ್ ಪೆನ್** ಉಪಯೋಗಿಸಿ.
5. ಈ ಭಾಷಾ ಪುಸ್ತಿಕೆಯ **ಸಂಕೇತ J** ಆಗಿದೆ. ಉತ್ತರ ಪತ್ರಿಕೆಯ **ಪುಟ–2** ರಲ್ಲಿ ಮುದ್ರಣವಾಗಿರುವ ಸಂಕೇತದೊಡನೆ ಹೊಂದುತ್ತದೆಯೇ ಎಂದು ಸುನಿಶ್ಚಿತಗೊಳಿಸಿಕೊಳ್ಳಿರಿ. ಜೊತೆಗೆ ಪ್ರಶ್ನೆ ಪತ್ರಿಕೆಯ ಸಂಖ್ಯೆ ಮತ್ತು ಉತ್ತರ ಪತ್ರಿಕೆಯ ಸಂಖ್ಯೆ ಸರಿಹೊಂದುವುದನ್ನೂ ಸುನಿಶ್ಚಿತಗೊಳಿಸಿಕೊಳ್ಳಿ. ಒಂದು ವೇಳೆ ಇವೆರಡೂ ಬೇರೆಯಾಗಿದ್ದರೆ, ಪರೀಕ್ಷಾರ್ಥಿ ಬೇರೆ ಪ್ರಶ್ನೆ ಪತ್ರಿಕೆ ಹಾಗೂ ಉತ್ತರ ಪತ್ರಿಕೆ ಕೊಡುವಂತೆ ನಿರೀಕ್ಷಕರಿಗೆ ತಕ್ಷಣ ಮನವಿ ಮಾಡಿರಿ.
6. ಈ ಪ್ರಶ್ನೆ ಪತ್ರಿಕೆಯಲ್ಲಿ **ಎರಡು** ಭಾಗಗಳಿವೆ ಭಾಗ IV ಮತ್ತು V, ಇದರಲ್ಲಿ **60** ವಸ್ತುನಿಷ್ಠ ಪ್ರಶ್ನೆಗಳಿವೆ, ಅವುಗಳಿಗೆ ಪ್ರತಿಯೊಂದಕ್ಕೂ **1** ಅಂಕ.
   ಭಾಗ–IV : ಭಾಷಾ I – (ಕನ್ನಡ) (ಪ್ರಶ್ನೆ 91 ರಿಂದ 120)
   ಭಾಗ–V : ಭಾಷಾ II – (ಕನ್ನಡ) (ಪ್ರಶ್ನೆ 121 ರಿಂದ 150)
7. ಭಾಗ–IV ರಲ್ಲಿ ಭಾಷೆ–I ಕ್ಕಾಗಿ 30 ಪ್ರಶ್ನೆಗಳು ಮತ್ತು ಭಾಗ–V ರಲ್ಲಿ ಭಾಷೆ–II ಕ್ಕಾಗಿ 30 ಪ್ರಶ್ನೆಗಳನ್ನು ಕೊಡಲಾಗಿದೆ. ಈ ಪ್ರಶ್ನೆ ಪತ್ರಿಕೆಯಲ್ಲಿ ಕೇವಲ ಕನ್ನಡ ಭಾಷೆಗೆ ಸಂಬಂಧಿಸಿದ ಪ್ರಶ್ನೆಗಳನ್ನು ಕೊಡಲಾಗಿದೆ. **ಒಂದು ವೇಳೆ ಭಾಷೆ–I ಮತ್ತು/ಅಥವಾ ಭಾಷೆ–II ರಲ್ಲಿ ನೀವು ಆಯ್ಕೆ ಮಾಡಿದ ಭಾಷೆಗಳು – ಕನ್ನಡ ಅಲ್ಲದೆ ಬೇರೆ ಇದ್ದರೆ, ದಯವಿಟ್ಟು ಆ ಭಾಷೆಯ ಪ್ರಶ್ನೆ ಪತ್ರಿಕೆ ಕೊಡುವಂತೆ ಮನವಿ ಮಾಡಿ. ನಿಮ್ಮ ಮನವಿ ಪತ್ರದಲ್ಲಿ ಆಯ್ಕೆ ಮಾಡಿದ ಭಾಷೆ ಹಾಗೂ ನೀವು ಉತ್ತರ ಬರೆಯುವ ಭಾಷೆ ಹೊಂದಿಕೆಯಾಗಬೇಕು.**
8. **ಪರೀಕ್ಷಾರ್ಥಿ ಭಾಗ–V (ಭಾಷೆ–II) ಕ್ಕಾಗಿ, ಭಾಷೆ–I (ಭಾಗ–IV) ರಲ್ಲಿ ಆರಿಸಿಕೊಂಡ ಭಾಷೆಯಲ್ಲದೇ ಕೊಟ್ಟಿರುವ ಪಟ್ಟಿಯಲ್ಲಿ ಬೇರೆ ಭಾಷೆಯನ್ನು ಆರಿಸಿಕೊಳ್ಳಬೇಕು.**
9. ಕಚ್ಚಾ ಕೆಲಸ/ಬರವಣಿಗೆಯನ್ನು ಪ್ರಶ್ನೆ ಪತ್ರಿಕೆಯಲ್ಲಿ ಅದಕ್ಕಾಗಿಯೇ ಖಾಲಿ ಬಿಟ್ಟಿರುವ ಸ್ಥಾನದಲ್ಲಿಯೇ ಮಾಡಬೇಕು.
10. ನಿಮ್ಮ ಎಲ್ಲಾ ಉತ್ತರಗಳನ್ನು ಕೇವಲ (OMR) ಉತ್ತರ ಪತ್ರಿಕೆಯಲ್ಲಿಯೇ ನಮೂದಿಸಿ. ನಿಮ್ಮ ಉತ್ತರವನ್ನು ಎಚ್ಚರಿಕೆಯಿಂದ ನಮೂದಿಸಿ. ಉತ್ತರ ಬದಲಾಯಿಸಲು ಬಿಳಿಯ ಬಣ್ಣದ (Whitener) ಉಪಯೋಗ ನಿಷೇಧಿಸಲಾಗಿದೆ.

ಪರೀಕ್ಷಾರ್ಥಿಯ ಹೆಸರು (ದೊಡ್ಡ ಅಕ್ಷರಗಳಲ್ಲಿ) : ______________________

ಕ್ರಮ ಸಂಖ್ಯೆ : (ಅಂಕೆಗಳಲ್ಲಿ) : ______________________

: (ಅಕ್ಷರಗಳಲ್ಲಿ) : ______________________

ಪರೀಕ್ಷಾ ಕೇಂದ್ರ (ದೊಡ್ಡ ಅಕ್ಷರಗಳಲ್ಲಿ) : ______________________

ಪರೀಕ್ಷಾರ್ಥಿಯ ಸಹಿ : ______________ ನಿರೀಕ್ಷಕರ ಸಹಿ : ______________

Facsimile signature stamp of
Centre Superintendent : ______________________

Prepp
Your Personal Exams Guide

ಅಭ್ಯರ್ಥಿಗಳು ಕನ್ನಡವನ್ನು **ಭಾಷೆ–I** ಎಂದು ಆರಿಸಿಕೊಂಡಿದ್ದರೆ ಮಾತ್ರ **ಭಾಗ–IV** ರಲ್ಲಿರುವ ಪ್ರಶ್ನೆಗಳನ್ನು **(ಪ್ರಶ್ನೆ ಸಂಖ್ಯೆ 91 - 120)** ಉತ್ತರಿಸಬೇಕು.

Candidates should attempt the questions from **Part-IV (Q.No. 91-120)**, if they have opted **KANNADA** as **Language-I** only.

Prepp
Your Personal Exams Guide

# PART–IV
# LANGUAGE-I
# KANNADA

ಅಭ್ಯರ್ಥಿಗಳು ಕನ್ನಡವನ್ನು **ಭಾಷೆ–I** ಎಂದು ಆರಿಸಿಕೊಂಡಿದ್ದರೆ ಮಾತ್ರ **ಭಾಗ–IV** ರಲ್ಲಿರುವ ಪ್ರಶ್ನೆಗಳನ್ನು (ಪ್ರಶ್ನೆ ಸಂಖ್ಯೆ **91-120**) ಉತ್ತರಿಸಬೇಕು.

**ನಿರ್ದೇಶನ : ಈ ಕೆಳಗಿನ ಲೇಖನ ಭಾಗವನ್ನು ಓದಿ, ಅನುಸರಿಸಿ ಬರುವ ಪ್ರಶ್ನೆಗಳಿಗೆ (ಪ್ರಶ್ನೆ ಸಂಖ್ಯೆ : 91–99) ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ.**

“ಎಂತಿದ್ದರೂ ಬಿಚ್ಚಿದ್ದೀನಲ್ಲಾ, ಅದರ ಬಾಡಿಗೆ ಒಂದು ಕೋಟ್ ಪೇಂಟ್ ಮಾಡಿಸಿ ಆಮೇಲೆ ಫಿಟ್ ಮಾಡುತ್ತೇನಣ್ಣ. ಆಮೇಲೆ ಅದು ಹೊಸ ಸ್ಕೂಟರ್ ಹಾಗೆ ಕಾಣದಿದ್ದರೆ ಕೇಳಿ!” ಎಂದೆ.

“ನೋಡೋ! ಬಿಚ್ಚಿ ಹಾಕಿದಷ್ಟು ಸುಲಭವಲ್ಲ ಮತ್ತೆ ಸರಿಯಾಗಿ ಜೋಡಿಸೋದು. ಅದೂ ಅಲ್ಲದೆ ಪೇಂಟ್ ಮಾಡಿಸಿ ಆಮೇಲೆ ಫಿಟ್ ಮಾಡುತ್ತೇನೆಂದು ಹೇಳ್ತಿದ್ದೀಯ. ಅಷ್ಟರೊಳಗೆ ಅದನ್ನು ಹ್ಯಾಗೆ ಬಿಚ್ಚಿದೆ ಅನ್ನೋದು ನಿನಗೆ ಮರ್ತ್ರೆ ಹೋದರೆ ಏನ್ಮಾಡ್ತೀಯ ?” ಎಂದೆನ್ನುತ್ತಾ ನಾನು ಸೀಮೆ ಎಣ್ಣೆಯಲ್ಲಿ ನೆನೆಹಾಕಿದ್ದ ವಸ್ತುಗಳನ್ನೆಲ್ಲಾ ನೋಡಿ ಇನ್ನಷ್ಟು ಆತಂಕಗೊಂಡು “ಛೇ ಛೇ! ಇವನ್ನೆಲ್ಲಾ ಯಾವುದನ್ನು ಯಾವುದಕ್ಕೆ ಸೇರಿಸುವುದು ? ಹ್ಯಾಗೆ ಸೇರಿಸುವುದು ? ದೇವರೇ ಗತಿ! ಬಿಚ್ಚಿದ ಹಾಗೇ ಫಿಟ್ ಮಾಡಿದರೆ ಸರಿ ಎನ್ನುತ್ತೀಯಲ್ಲಾ! ನೀನು ಹೇಳಿದಷ್ಟು ಸುಲಭ ಕಾಣುತ್ತಿಲ್ಲ ನನಗೆ. ಯಾವುದೋ ಒಂದು ಪಾರ್ಟ್ ಬಿಚ್ಚಿದರೆ ಬಿಚ್ಚಿದ ಹಾಗೇ ಮತ್ತೆ ಫಿಟ್ ಮಾಡಿ ಸರಿಮಾಡಬಹುದೇನೋ! ನೀನು ಇಡಿ ಸ್ಕೂಟರನ್ನೇ ಬಿಚ್ಚಿಹಾಕಿದ್ದೀಯ!” ಎಂದು ಅಸಮಾಧಾನದಲ್ಲಿ ತಲೆಯಾಡಿಸುತ್ತ ಒಳಗೆ ಹೋದರು.

ಅಣ್ಣನಿಗೆ ನನ್ನ ರಿಪೇರಿ ನೋಡಿ ಕಳವಳ ಪಡುವುದಕ್ಕೆ ಸಾಕಷ್ಟು ಹಿನ್ನೆಲೆ ಇತ್ತು. ನನ್ನ ರಿಪೇರಿ ಚಾಳಿಯಿಂದ ಬೇಕಾದಷ್ಟು ಸಾಮಾನುಗಳನ್ನು ಹಾಳುಮಾಡಿದ್ದು ಅವರು ಕಣ್ಣಾರೆ ನೋಡಿದ್ದರು. ಆದರೆ ಅವುಗಳೆಲ್ಲದರ ಫಲವಾಗಿ ನಾನು ಪಡಕೊಂಡ ಪರಿಣತಿ ಮತ್ತು ಆತ್ಮವಿಶ್ವಾಸ ಅವರ ಕಣ್ಣಿಗೆ ಕಾಣುತ್ತಿರಲಿಲ್ಲ. ಸ್ಕೂಟರ್ ಬಿಚ್ಚಿದಷ್ಟು ಮತ್ತೆ ಜೋಡಿಸುವುದು ಸುಲಭವಲ್ಲ ಎಂದು ಅವರು ಹೇಳಿದ್ದು ಸುಳ್ಳಲ್ಲ. ಆದರೆ ಅದಕ್ಕೆಲ್ಲ ಹೆದರಿ ಸುಮ್ಮನಿರಲಾಗುತ್ತದೆಯೆ ? ನಾನು ಈ ಸಾರಿ ಅದನ್ನು ನಿರ್ದಾಕ್ಷಿಣ್ಯವಾಗಿ ಬಿಚ್ಚಿಹಾಕುತ್ತಿದ್ದ ಪರಿ, ನನ್ನ ಅಲಕ್ಷ್ಯ, ಆತ್ಮವಿಶ್ವಾಸಗಳನ್ನು ನೋಡಿ ಅವರಿಗೆ ಇವನು ರಿಪೇರಿ ಕಲಿತುಕೊಂಡಿದ್ದರೂ ಇರಬಹುದು ಎಂದು ಅನುಮಾನ ಬಂದಿರಬಹುದು.

ನಾನು ಅದರ ಬಾಡಿ, ಮಡ್‌ಗಾರ್ಡ್ ಇವಕ್ಕೆಲ್ಲಾ ಬಣ್ಣ ಹೊಡೆಸಿ ತಂದು ಒಂದೊಂದಾಗಿ ಫಿಟ್ ಮಾಡಿದೆ. ಎಂಜಿನ್ ಕೇಸಿಂಗಿಗೂ ಅಲ್ಯೂಮಿನಂ ಬಫಿಂಗ್ ಮಾಡಿಸಿ ಫಳಫಳ ಹೊಳೆಯುವಂತೆ ಮಾಡಿದ್ದೆ. ಅದನ್ನೆಲ್ಲಾ ಫಿಟ್ ಮಾಡಿದ ಮೇಲೆ ನನ್ನ ಸ್ಕೂಟರು ಹೊಸ ಗಾಡಿಗಿಂತ ಚೆನ್ನಾಗಿ ಹೊಳೆಯಲು ಶುರುವಾಯ್ತು. ನನಗೆ ನಿಜಕ್ಕೂ ತೊಂದರೆ ಇದ್ದಿದ್ದು ಎಲ್ಲಾ ಫಿಟ್ ಮಾಡಿದ ಮೇಲೆ ಮಾಡಬೇಕಾದ ಅದರ ಎಂಜಿನ್ನಿನ ಸೂಕ್ಷ್ಮ ಅಡ್ಜಸ್ಟ್‌ಮೆಂಟುಗಳಲ್ಲಿ. ಪಾಯಿಂಟ್ ಸೆಟ್ಟು, ಇಗ್ನಿಷನ್ ಟೈಮಿಂಗು ಮುಂತಾದ ಎಂಜಿನ್ನಿನ ಕಾರ್ಯದಕ್ಷತೆಗೆ ಬೇಕಾದ ಸೂಕ್ಷ್ಮಗಳನ್ನು ಅಡ್ಜಸ್ಟ್ ಮಾಡುವಲ್ಲಿ. ಅದಕ್ಕಾಗೇ ಗಲ್ಲಿಗಲ್ಲಿ ತಿರುಗಿ ಅದಕ್ಕೆ ಸಂಬಂಧಿಸಿದ ವಿವರಗಳಿರುವ ಒಂದು ಪುಸ್ತಕ ಕೊಂಡು ತಂದಿದ್ದೆ.

ಚೀಲದಲ್ಲಿ ಮೂಟೆಕಟ್ಟಿ ಬಿದ್ದಿದ್ದ ನೂರಾರು ಸರಕುಗಳನ್ನೆಲ್ಲಾ ಒಂದೊಂದಾಗಿ ಜೋಡಿಸಿ ಮತ್ತೆ ಸ್ಕೂಟರು ರೂಪ ಪಡೆಯುತ್ತಿದ್ದುದನ್ನು ನೋಡಿ ಅಣ್ಣನಿಗೆ ತುಂಬಾ ಖುಷಿಯಾಗಿ “ಪರ್ವಾಗಿಲ್ಲ ಮಾರಾಯ, ಸುಮಾರಾಗಿ ರಿಪೇರಿ ಕಲ್ತಿದ್ದೀಯ?” ಎಂದು ತಲೆದೂಗಿದರು. ನಾನು ಎಂ.ಎ. ಪಾಸು ಮಾಡಿದಾಗಲೂ ಅಣ್ಣನಿಗೆ ಅಷ್ಟೇನೋ ಸಂತೋಷವಾಗಿರಲಿಲ್ಲ. ಏಕೆಂದರೆ ಅದನ್ನೆಲ್ಲಾ ಅವರೂ ಸಾಧಿಸಿದ್ದರು. ಆದರೆ ಸ್ಕೂಟರ್ ಸಂಪೂರ್ಣ ಬಿಚ್ಚಿ ರಿಪೇರಿ ಮಾಡಿ ಮತ್ತೆ ಅದನ್ನು ಜೋಡಿಸಿದ್ದು ಅವರ ಜೀವನದಲ್ಲಿ ಅವರು ಸಾಧಿಸದ ಸಾಧನೆಯಾದ್ದರಿಂದ ನಾನು ನಿಜಕ್ಕೂ ಪ್ರತಿಭಾವಂತನೇ ಇರಬಹುದು ಎಂದು ಅವರಿಗೆ ಅನ್ನಿಸಿರಬೇಕು.

ನಾನು ನನ್ನ ಸ್ಕೂಟರು ಸ್ಟಾರ್ಟ್ ಮಾಡಿಕೊಂಡು ಒಂದು ರೌಂಡ್ ಪರೀಕ್ಷಾರ್ಥ ಪೇಟೆವರೆಗೆ ಹೋಗಿ ಹಿಂದಿರುಗಿ ಬಂದಾಗ ಚಿಂತಾಕ್ರಾಂತರಾಗಿ ನಾನು ರಿಪೇರಿ ಮಾಡುತ್ತಿದ್ದ ಜಾಗದಲ್ಲಿ ನಿಂತಿದ್ದರು. ನನ್ನನ್ನು ನೋಡಿ "ಅಲ್ಲೋ, ಬೇಕಾದಷ್ಟು ಸಾಮಾನು ಜೋಡಿಸುವುದು ಮರೆತು ಇಲ್ಲೇ ಬಿಟ್ಟಿದ್ದೀಯಲ್ಲೋ, ಇದು ಯಾವತರ ರಿಪೇರಿ ನಿಂದು" ಎಂದು ಅಲ್ಲೆಲ್ಲಾ ಚದುರಿ ಬಿದ್ದಿದ್ದ ಅನೇಕ ಸಾಮಾನುಗಳನ್ನು ತೋರಿಸಿದರು.

"ಅವೆಲ್ಲಾ ಬೇಡಾಂತ ಬಿಸಾಗಿ ಬದಲಿಗೆ ಹೊಸವನ್ನು ತಂದು ಹಾಕಿದ್ದೇನಣ್ಣಾ. ಅಷ್ಟು ಸಾಮಾನು ಹಾಕದೆ ಮರೆತರೆ ಆ ಸ್ಕೂಟರ್ ಓಡಿಸಲು ಸಾಧ್ಯವ ?" ಎಂದೆ. ಆದರೂ ಅಣ್ಣನಿಗೆ ಅನುಮಾನ! ಇವನ್ನು ಎಲ್ಲಿ ಜೋಡಿಸುವುದು ಎನ್ನುವುದು ತಿಳಿಯದೆ ಮರೆತು ಇಲ್ಲಿ ಬಿಸಾಕಿದ್ದಾನೆ ಎಂದು.

ನಾನು ನನ್ನ ಫಳಫಳ ಹೊಳೆಯುವ ಸ್ಕೂಟರ್ ಮೇಲೆ ಓಡಾಡುವುದನ್ನು ನೋಡಿ ತಡೆಯಲಾರದೆ ಶಾಮಣ್ಣ ಒಂದು ಮೋಟಾರು ಸೈಕಲ್ಲು ತಗೊಂಡರು. ಅದರ ಹೃದಯಂಗಮ ಕತೆಗೂ ಅಣ್ಣನ ನೆನಪಿಗೂ ನೇರವಾದ ಸಂಬಂಧವಿಲ್ಲ. ಆದ್ದರಿಂದ ಅದನ್ನು ಬರೆಯಬೇಕೋ ಬೇಡವೋ ನನಗೆ ಗೊತ್ತಾಗುತ್ತಿಲ್ಲ. ಆದರೆ ಇವೆಲ್ಲ ಮೈಸೂರಿನ ನನ್ನ ಅಣ್ಣನ ನೆನಪಿನ ಅವಿಭಾಜ್ಯ ಅಂಗಗಳೇ ಆಗಿವೆ.

**91.** 'ಸಾಮಾನುಗಳನ್ನು' ಪದದಲ್ಲಿರುವ ವಿಭಕ್ತಿ ಪ್ರತ್ಯಯ :

(1) ದ್ವಿತೀಯಾ ವಿಭಕ್ತಿ (2) ಷಷ್ಠಿ ವಿಭಕ್ತಿ (3) ಪ್ರಥಮಾ ವಿಭಕ್ತಿ (4) ಸಪ್ತಮಿ ವಿಭಕ್ತಿ

**92.** 'ಫಳಫಳ' ಎಂಬ ಪದವು :

(1) ಜೋಡುಪದ (2) ನುಡಿಗಟ್ಟು (3) ದ್ವಿರುಕ್ತಿ (4) ಉರ್ದು ಪದ

**93.** ಶಾಮಣ್ಣ ಮೊಟಾರು ಸೈಕಲ್ ತೆಗೆದುಕೊಳ್ಳಲು ಕಾರಣವೇನು ?

(1) ಗಾಡಿಗೆ ಪೇಯಿಂಟಿಂಗ್ ಮಾಡಿದ್ದಕ್ಕೆ
(2) ಕಾಲೇಜಿಗೆ ಹೋಗಲು
(3) ಲೇಖಕರ ಅಲಕ್ಷ್ಯ ಮತ್ತು ಆತ್ಮವಿಶ್ವಾಸ ನೋಡಿ
(4) ಲೇಖಕರು ಫಳಫಳ ಹೊಳೆಯುವ ಸ್ಕೂಟರ್ ಮೇಲೆ ಓಡಾಡಿದ್ದಕ್ಕೆ

**94.** ಅಣ್ಣನಿಗೆ ಅನುಮಾನ ಉಂಟಾಗಲು ಕಾರಣವೇನು ?

(1) ಒಂದು ರೌಂಡ್ ಪರೀಕ್ಷಾರ್ಥ ಪೇಟೆಗೆ ಹೋಗಿದ್ದಕ್ಕೆ
(2) ವಸ್ತುಗಳನ್ನೆಲ್ಲಾ ಸೀಮೆ ಎಣ್ಣೆಯಲ್ಲಿ ನೆನೆಹಾಕಿದ್ದಕ್ಕೆ
(3) ಹೊಸವನ್ನು ತಂದು ಜೋಡಿಸಿದ್ದಕ್ಕೆ
(4) ಸರಕುಗಳನ್ನು ಎಲ್ಲಿ ಜೋಡಿಸುವುದು ಎಂದು ತಿಳಿಯದೆ ಮರೆತಿದ್ದಾನೆ ಎಂಬುದಕ್ಕೆ

**95.** 'ಶುರುವಾಯ್ತು'– ಇದು ಯಾವ ಸಂಧಿ ?

(1) ಲೋಪಸಂಧಿ (2) ಆಗಮಸಂಧಿ
(3) ಸವರ್ಣದೀರ್ಘ ಸಂಧಿ (4) ಆದೇಶಸಂಧಿ

**96.** ಅಣ್ಣನಿಗೆ ರಿಪೇರಿ ನೋಡಿ ಏಕೆ ಕಳವಳ ಉಂಟಾಯಿತು ?

(1) ರಿಪೇರಿ ಚಾಳಿಯಿಂದ ಬೇಕಾದಷ್ಟು ಸಾಮಾನುಗಳನ್ನು ಹಾಳುಮಾಡಿದ್ದು
(2) ರಿಪೇರಿ ಮಾಡಲು ಮರೆತಿದ್ದುದು
(3) ಲೇಖಕರ ಪ್ರತಿಭೆಯ ಬಗ್ಗೆ ಅನುಮಾನವಿದ್ದುದು
(4) ಇಂಜನ್ನಿನ ಸೂಕ್ಷ್ಮ ಅಡ್ಜಸ್ಟ್‌ಮೆಂಟ್‌ಗಳು ತಿಳಿಯದಿದ್ದುದು

97. ಕಳವಳ ಪದದ ಅರ್ಥವೇನು ?
(1) ಸಂತಸ (2) ಹೆಮ್ಮೆ (3) ದುಃಖ (4) ಆತಂಕ

98. ಅಲಕ್ಷ್ಯ ಪದದ ವಿರುದ್ಧಾರ್ಥಕ ಪದ :
(1) ನಿರ್ಲಕ್ಷ್ಯ (2) ಲಕ್ಷ್ಯ (3) ಉಪೇಕ್ಷೆ (4) ಅನಾದರ

99. ಅಣ್ಣನಿಗೆ ಖುಷಿಯಾಗಲು ಕಾರಣವೇನು ?
(1) ಎಂ.ಎ. ಪಾಸು ಮಾಡಿದ್ದಕ್ಕೆ
(2) ಸ್ಕೂಟರ್ ಸ್ಟಾರ್ಟ್ ಮಾಡಿದ್ದಕ್ಕೆ
(3) ಒಂದೊಂದೇ ವಸ್ತುಗಳನ್ನು ಜೋಡಿಸಿ ಮತ್ತೆ ಸ್ಕೂಟರ್ ರೂಪ ಪಡೆಯುತ್ತಿದ್ದುದಕ್ಕೆ
(4) ಸರಕುಗಳನ್ನು ಮೂಟೆಯಲ್ಲಿ ಕಟ್ಟಿದ್ದಕ್ಕೆ

**ನಿರ್ದೇಶನ : ಈ ಕೆಳಗಿನ ಕವನವನ್ನು ಓದಿ, ಅನುಸರಿಸಿ ಬರುವ ಪ್ರಶ್ನೆಗಳಿಗೆ (ಪ್ರಶ್ನೆ ಸಂಖ್ಯೆ : 100–105) ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ.**

ಬೂದಿಯ ಮೇಗಡೆ ಹೊರಳಾಡುವುದೇ ಕತ್ತೆಗೆ ಬಿಡುವಿನ ಆನಂದ
ಬಚ್ಚಲ ನೀರನು ಲೊಚ ಲೊಚ ನೆಕ್ಕುತ ನಾಯಿ ಪಡುತಿದೆ ಸೊದೆಕುಡಿತ
ಊರಿನ ನಾರುವ ಕೇರಿಕೇರಿಗಳ
ಹೊಲಸಿನತ್ತ ಹಂದಿಗೆ ತುಡಿತ
ಯಾರಾರಿಗೆ ಏನೆಂಥದು ಹಿತವೋ ಅವರವರಿಗೆ ಅದೆ ಅದೆ ವಿಹಿತ
ಒಂದನು ಹೊಗಳೆ ಒಂದನು ತೆಗಳೆ ಬರಿದೊಡ್ಡಸ್ತಿಕೆ ಮತ್ತೇನು ?
ತುಷ್ಟಿಯನೀತೆರ ಬಟ್ಟಿಯಿಳಿಸುವೀ ಸುಖಗಳ ಸುಖವರಿವುದೆ ಜಾಣು.

100. ಹೊಲಸಿನತ್ತ ಹಂದಿಯು ತುಡಿಯುವುದನ್ನು ಇಲ್ಲಿ ಹೇಗೆ ಗ್ರಹಿಸಲಾಗಿದೆ ?
(1) ಸರಿ ಎಂದು (2) ಸರಿಯಲ್ಲ ಎಂದು
(3) ಅದರ ಜೀವನವನ್ನು ಗೌರವಿಸಬೇಕೆಂದು (4) ಅಸಹ್ಯವೆಂದು

101. ಪಡುತಿದೆ – ಈ ಪದವನ್ನು ಭೂತಕಾಲಕ್ಕೆ ಪರಿವರ್ತಿಸಿ.
(1) ಪಟ್ಟಿತು (2) ಪಡ್ಡಿದೆ (3) ಪಡುತ್ತಾ ಇದೆ (4) ಪಡುತ್ತಿತ್ತು

102. 'ದೊಡ್ಡಸ್ತಿಕೆ' – ಈ ಪದದ ಅರ್ಥ :
(1) ಒಣ ಜಂಬ (2) ದೊಡ್ಡ ಮನುಷ್ಯ (3) ಶ್ರೀಮಂತಿಕೆ (4) ದೊಡ್ಡತನ

103. ಈ ಕವನದ ಮುಖ್ಯವಾದ ತತ್ವವು ಏನು ?
(1) ಅವರವರಿಗೆ ಹಿತವಾದ ಬದುಕು ಅಹಿತವಾದದ್ದು
(2) ಅಸಹ್ಯಕರವಾದ ಬದುಕು ತಪ್ಪು
(3) ವಿಭಿನ್ನ ಜೀವನಕ್ರಮದ ಮೌಲ್ಯಮಾಪನ ತಪ್ಪು
(4) ಪ್ರಾಣಿಗಳ ಶೋಚನೀಯ ಸ್ಥಿತಿಯನ್ನು ನಿವಾರಿಸುವುದು

104. ಭಟ್ಟಿಯಿಳಿಸು – ಈ ಪದದಲ್ಲಿರುವ ಸಂಧಿ :
(1) ಲೋಪಸಂಧಿ (2) ಆದೇಶಸಂಧಿ (3) ವಕಾರಾಗಮ ಸಂಧಿ (4) ಆಗಮಸಂಧಿ

**105.** ಹಂದಿಗೆ – ಈ ಪದದಲ್ಲಿರುವ ವಿಭಕ್ತಿ :

(1) ಚತುರ್ಥಿ (2) ತೃತೀಯಾ (3) ದ್ವಿತಿಯಾ (4) ಷಷ್ಠಿ

**106.** ಈ ಮುಂದಿನ ವಾಕ್ಯಕ್ಕೆ ಸಂಬಂಧಿಸಿದಂತೆ ಈ ಮುಂದಿನವುಗಳಲ್ಲಿ ಯಾವುದು ಸರಿಯಲ್ಲ ?

ಪ್ರಾಸ ಪದ್ಯಗಳು, ಹಾಡುಗಳು ಮತ್ತು ಸ್ತೋತ್ರಗಳು–ಮಕ್ಕಳಿಗೆ ಈ ಕೆಳಕಂಡ ಸಂಗತಿಗಳನ್ನು ಸಾಧಿಸಲು ಮಾರ್ಗಗಳಾಗಿವೆ.

(1) ಪದಗಳು ಮತ್ತು ವಾಕ್ಯರಚನೆ ಕಂಠಪಾಠ ಮಾಡಲು

(2) ಉಚ್ಚಾರಣೆಯನ್ನು ಅಭ್ಯಾಸ ಮಾಡಲು

(3) ವಾಕ್ಯದ ಅಭಿವ್ಯಕ್ತಿ ಮತ್ತು ಸಮಂಜಸತೆಯನ್ನು ವರ್ಧಿಸುತ್ತದೆ

(4) ಶಬ್ದ ಸಂಪತ್ತು ವಿಸ್ತಾರವಾಗಲು

**107.** ಭಾಷಾ ತರಗತಿಯಲ್ಲಿ ತಮ್ಮ ಮೂಲ ಭಾಷೆಯನ್ನು ಬಳಸುವುದಕ್ಕೆ ಕಲಿಯುವವರನ್ನು ಪ್ರೋತ್ಸಾಹಿಸದಿರುವ ಪ್ರಸ್ತಾವನೆ/ವಿಧಾನವೆಂದರೆ :

(1) ಸಂವಹನಶೀಲ ಪ್ರಸ್ತಾವನೆ

(2) ನೇರ ವಿಧಾನ

(3) ಕೇಳಿಸುವ ಮೂಲಕ ಭಾಷೆ ಕಲಿಸುವ (Audio lingual) ವಿಧಾನ

(4) ಸ್ವಾಭಾವಿಕ ಪ್ರಸ್ತಾವನೆ

**108.** ಪ್ರಾಥಮಿಕ ಹಂತದಲ್ಲಿ ಲೈಬ್ರರಿಯ ಉಪಯೋಗವನ್ನು ಪಡೆಯುವ ಬಗ್ಗೆ ಈ ಕೆಳಕಂಡ ಹೇಳಿಕೆಗಳಲ್ಲಿ ಯಾವ ಹೇಳಿಕೆ ಸರಿಯಲ್ಲ ?

ಗ್ರಂಥಾಲಯವನ್ನು ಕೇವಲ ಪುಸ್ತಕಗಳನ್ನು ಸಂಗ್ರಹಿಸಿಡುವ ಸ್ಥಳವಾಗಿ ನೋಡಬಾರದು, ಬದಲಾಗಿ :

(1) ಪುಸ್ತಕಗಳೊಂದಿಗೆ ತೊಡಗಿಕೊಳ್ಳುವುದಕ್ಕೆ ಕ್ರಿಯಾತ್ಮಕವಾದ ವಾತಾವರಣವಾಗಿ ಗ್ರಹಿಸಬಹುದು.

(2) ಶಿಕ್ಷಕರು ಮತ್ತು ಇತರ ವಯಸ್ಕ ವ್ಯಕ್ತಿಗಳೂ ಸಹ ಗ್ರಂಥಾಲಯಗಳಲ್ಲಿ ಓದುವ ನಡವಳಿಕೆಗೆ ಮಾದರಿಯಾಗಬಹುದು.

(3) ಗ್ರಂಥಾಲಯಗಳಲ್ಲಿ ಪಠ್ಯಪುಸ್ತಕಗಳನ್ನು ಜೋರಾಗಿ ಓದುವುದು ಉತ್ತಮ.

(4) ಕಲಿಯುವವರನ್ನು ಮಕ್ಕಳ ಸಾಹಿತ್ಯದ ವೈವಿಧ್ಯಮಯ ಪ್ರಕಾರಗಳಿಗೆ ಒಡ್ಡಬಹುದು.

**109.** ಅಕ್ಷರಗಳು ಮತ್ತು ಉಚ್ಚಾರಣೆಗಳ ನಡುವಿನ ಸಂಬಂಧವನ್ನು ಒತ್ತಿಹೇಳುವ ಅಕ್ಷರಜ್ಞಾನ ಕಲಿಸುವ ವಿಧಾನವನ್ನು ಏನೆಂದು ಕರೆಯುತ್ತಾರೆ ?

(1) ವ್ಯಾಕರಣ ಭಾಷಾಂತರ ವಿಧಾನ

(2) ಸಂದರ್ಭಕ್ಕನುಸಾರವಾಗಿ ಕಲಿಸುವ ವಿಧಾನ

(3) ಉಚ್ಚರಿತ ಧ್ವನಿಗಳ ಬೋಧನೆ

(4) ಇಡೀ ಭಾಷಾ ಕಲಿಕಾ ವಿಧಾನ

**110.** Vನೇ ತರಗತಿಯ ವಿದ್ಯಾರ್ಥಿಯು ತನ್ನ ಕೆಲಸವನ್ನು ಶಿಕ್ಷಕಿಗೆ ತೋರಿಸುವುದಕ್ಕೆ ಮುನ್ನ ನಿಖರತೆಗಾಗಿ ಅದನ್ನು ಅಂತಿಮವಾಗಿ ಪರಿಶೀಲಿಸುತ್ತೇನೆ ಎಂದು ಹೇಳುತ್ತಾಳೆ. ಈಗ ವಿದ್ಯಾರ್ಥಿಯು ಬರವಣಿಗೆಯ ಯಾವ ಹಂತದಲ್ಲಿ ಕೆಲಸ ಮಾಡುತ್ತಿದ್ದಾಳೆ ?

(1) ಮರು ಕರಡು ರಚನೆ (2) ಕರಡು ಪ್ರತಿ ಪರಿಶೀಲನೆ

(3) ಸಹ ಅಧ್ಯಾಯಿಗಳಿಂದ ಮೌಲ್ಯಮಾಪನ (4) ಕರಡು ರಚನೆ

**111.** ಮೂರನೇ ತರಗತಿಯ ಶಿಕ್ಷಕಿಯು ತನ್ನ ತರಗತಿಯಲ್ಲಿ ಓದುವುದಕ್ಕಾಗಿ ಒಂದು ಸ್ಥಳವನ್ನು ನಿಗದಿಪಡಿಸಲು (Reading corner) ಬಯಸಿದ್ದಾಳೆ. ಮಕ್ಕಳ ಪುಸ್ತಕವನ್ನು ಆಯ್ಕೆಮಾಡುವುದಕ್ಕೆ ನಿರ್ಧರಿಸುವಾಗ, ಈ ಮುಂದಿನ ಪ್ರಶ್ನೆಗಳಲ್ಲಿ ಯಾವ ಪ್ರಶ್ನೆಯು ಮೊದಲು ಪರಿಗಣಿಸಬೇಕಾದ ತುಂಬಾ ಮುಖ್ಯವಾದ ಪ್ರಶ್ನೆಯಾಗಿದೆ ?

(1) ಈ ಪುಸ್ತಕಗಳನ್ನು ತರಗತಿಯಲ್ಲಿನ ಬಹುತೇಕ ವಿದ್ಯಾರ್ಥಿಗಳು ಸ್ವತಂತ್ರವಾಗಿ ಓದುವಂತಹ ಮಟ್ಟದಲ್ಲಿ ಬರೆಯಲಾಗಿದೆಯೇ ?

(2) ಈ ಪುಸ್ತಕಗಳು ಮೂರನೇ ತರಗತಿಯ ಮಕ್ಕಳು ಓದುವ ಪಠ್ಯಕ್ರಮದ ಗುರಿಗಳನ್ನು ಸಾಧಿಸಲು ನೆರವಾಗುತ್ತವೆಯೇ ?

(3) ಈ ಪುಸ್ತಕಗಳು ಒಂದು ಕಲಿಕೆಯ ಸಂದರ್ಭಕ್ಕಿಂತ ಹೆಚ್ಚು ಸಂದರ್ಭಗಳಲ್ಲಿ ಬಳಸುವಷ್ಟು ಸೂಕ್ತವಾಗಿವೆಯೇ ?

(4) ಈ ಪುಸ್ತಕಗಳ ಲೇಖಕರು ಮಕ್ಕಳ ಸಾಹಿತ್ಯದಲ್ಲಿ ಸುಪ್ರಸಿದ್ಧರಾದ, ಮಾನ್ಯತೆ ಪಡೆದ ಸಾಹಿತಿಯಾಗಿದ್ದಾರೆಯೇ ?

**112.** ದೈನಂದಿನ ಜೀವನದ ಸನ್ನಿವೇಶಗಳಲ್ಲಿ ಭಾಷೆಯನ್ನು ಬಳಸುವ ಕಲಿಯುವವನ ಮುಖ್ಯ ಗುರಿಯನ್ನು ಸಾಧಿಸುವಲ್ಲಿ ಈ ಮುಂದಿನ ಯಾವ ಪ್ರಸ್ತಾವನೆ/ವಿಧಾನ ಪೂರಕವಾಗಿದೆ ?

(1) ಸಂವಹನಶೀಲ ಪ್ರಸ್ತಾವನೆ

(2) ನೇರ ವಿಧಾನ

(3) ಕೇಳಿಸುವ (Audio lingual) ಮೂಲಕ ಭಾಷೆ ಕಲಿಯುವ ವಿಧಾನ

(4) ಸ್ವಾಭಾವಿಕ ಪ್ರಸ್ತಾವನೆ

**113.** IIIನೇ ತರಗತಿಯ ಶಿಕ್ಷಕಿಯು ತನ್ನ ವಿದ್ಯಾರ್ಥಿಗಳಿಗೆ, ಅವರ ಜೊತೆ ಓದುವ ಸಹ ಅಧ್ಯಾಯಿಗಳಿಗೆ 'ಬಲ್ಲೆಯಾ' (can) ಎಂಬ ಪದವನ್ನು ಬಳಸುವ ಅವರ ಸಾಮರ್ಥ್ಯದ ಬಗ್ಗೆ ಐದು ಪ್ರಶ್ನೆಗಳನ್ನು ಕೇಳುವಂತೆ ಹೇಳುತ್ತಾಳೆ. ಉದಾಹರಣೆಗೆ ನೀನು ಈಜಬಲ್ಲೆಯಾ ? ಈ ಬಗೆಯ ಚಟುವಟಿಕೆಯನ್ನು ಯಾವ ಉದ್ದೇಶಕ್ಕಾಗಿ ಮಾಡಿಸಲಾಗುತ್ತದೆ ?

(1) ನಿಯಂತ್ರಿತ ವಾಚಿಕ ಅಭ್ಯಾಸಕ್ಕಾಗಿ

(2) ಮುಕ್ತವಾಗಿ ಮಾತನಾಡುವುದಕ್ಕಾಗಿ

(3) ನಿಷ್ಕ್ರಿಯಾತ್ಮಕವಾದ ಕೇಳುವಿಕೆ

(4) ವಾಚಿಕ ನಿರರ್ಗಳತೆಯ ಅಭ್ಯಾಸಕ್ಕಾಗಿ

**114.** ವ್ಯಾಕರಣವನ್ನು ಪರಿಣಾಮಕಾರಿಯಾಗಿ ಬೋಧಿಸುವ ವಿಷಯದಲ್ಲಿ ಈ ಮುಂದಿನ ಅಂಶಗಳಲ್ಲಿ ಯಾವುದು ಸರಿಯಲ್ಲ ?

(1) ವ್ಯಾಕರಣದ ಸಂಬಂಧಪಟ್ಟ ನಿಯಮಗಳನ್ನು ಹೊರತೆಗೆಯುವುದು

(2) ಸಂವಹನಶೀಲ ವಿಧಾನದಲ್ಲಿ ಅಭ್ಯಾಸ ಮಾಡಿಸುವುದು

(3) ವ್ಯಾಕರಣದ ನಿಯಮಗಳನ್ನು ಕಂಠಪಾಠ ಮಾಡುವ ಮೂಲಕ ಅದನ್ನು ಕಲಿಯುವುದು

(4) ನಿಜವಾದ ಸಂವಹನಶೀಲತೆಯನ್ನು ಪ್ರಸ್ತುತ ಪಡಿಸುವುದು

**115.** ಶಿಕ್ಷಕರು ತನ್ನ II ನೆಯ ತರಗತಿಯ ವಿದ್ಯಾರ್ಥಿಗಳಿಗಾಗಿ ವೈವಿಧ್ಯಮಯವಾದ ಬೋಧನಾ ಕಲಿಕಾ ಪರಿಕರಗಳನ್ನು (TLM) ಸಂಗ್ರಹಿಸಲು ಯೋಚಿಸುತ್ತಿದ್ದಾರೆ. ಬೋಧನಾ ಕಲಿಕಾ ಪರಿಕರಗಳನ್ನು (TLM) ಆಯ್ಕೆ ಮಾಡುವುದಕ್ಕೆ ಈ ಮುಂದಿನವುಗಳಲ್ಲಿ ಯಾವುದು ಸರಿಯಾದ ಮಾನದಂಡವಲ್ಲ ?

(1) ಆಯ್ಕೆ ಮಾಡಿದ ಪರಿಕರಗಳು ಮಕ್ಕಳು ಕುತೂಹಲದಿಂದ ಹೊಸದನ್ನು ಅನ್ವೇಷಿಸಲು ಮತ್ತು ಪ್ರಯೋಗ ಮಾಡಲು ಅವರಿಗೆ ಸಾಕಷ್ಟು ಅವಕಾಶಗಳನ್ನು ಕಲ್ಪಿಸುವಂತಿರಬೇಕು.

(2) ಆಯ್ಕೆ ಮಾಡಿದ ಪರಿಕರಗಳು, ಸ್ಥಳೀಯವಾಗಿ ತಯಾರಿಸಿದ ಮತ್ತು ಸ್ಥಳೀಯವಾಗಿ ಸಿಗಬಹುದಾದಂತಹ ಪರಿಕರಗಳಾಗಿದ್ದು ಅವುಗಳಿಗೆ ಆದ್ಯತೆ ನೀಡಬೇಕು. ಇದರಿಂದಾಗಿ ಅವುಗಳನ್ನು ಸುಲಭವಾಗಿ ಬದಲಾಯಿಸಬಹುದು.

(3) ಆಯ್ಕೆ ಮಾಡಿದ ಪರಿಕರಗಳನ್ನು ಮಕ್ಕಳೇ ಮಾಡಿರಬೇಕು ಮತ್ತು ಅವು ಜಾರುವುದನ್ನು ತಪ್ಪಿಸಲು ಸ್ವಲ್ಪ ಒರಟಾಗಿರಬೇಕು.

(4) ಆಯ್ಕೆ ಮಾಡಿದ ಪರಿಕರಗಳು ಈ ವಯೋಮಾನದ ಮಕ್ಕಳು ಬಳಸುವುದಕ್ಕೆ ಆಕರ್ಷಕವಾಗಿರಬೇಕು ಮತ್ತು ಸುರಕ್ಷಿತವಾಗಿರಬೇಕು.

116. ಶಿಕ್ಷಕರು ಕಲಿಯುವವರಿಗೆ ತಾವು ಬರೆದಿರುವ ಪುಸ್ತಕಗಳನ್ನು ವಿನಿಮಯ ಮಾಡಿಕೊಂಡು ನಂತರ ಅವರ ಸಹ ಅಧ್ಯಾಯಿಗಳ ಕೆಲಸವನ್ನು ಪರಿಶೀಲಿಸಲು ಹೇಳುತ್ತಾರೆ. ಈ ಚಟುವಟಿಕೆಯ ಉದ್ದೇಶವೆಂದರೆ,

(1) ಹೊಸ ಹೊಸ ಶಬ್ದಗಳನ್ನು ಬಳಸಲು ಅಭ್ಯಾಸ ಮಾಡಿಸುವುದು.

(2) ರಚನಾ ವಿನ್ಯಾಸವನ್ನು ನಿಯಂತ್ರಿತವಾಗಿ ಅಭ್ಯಾಸ ಮಾಡಿಸುವುದು.

(3) ಸಹ ಅಧ್ಯಾಯಿಗಳ ಸರಿಪಡಿಸುವ ಕೌಶಲ್ಯವನ್ನು ವೃದ್ಧಿಸುವುದು.

(4) ಸೂಕ್ಷ್ಮವಾಗಿ ಓದುವುದಕ್ಕೆ ಅಭ್ಯಾಸ ಮಾಡಿಸುವುದು.

117. ಶಿಕ್ಷಣದ ಅತಿ ಆರಂಭಿಕ ಹಂತದಲ್ಲಿರುವ ಮಕ್ಕಳನ್ನು ಅವರು ಕೆಳಕಂಡ ಹಂತದಲ್ಲಿದ್ದಾಗಲೇ ಅವರನ್ನು ಕಲಿಕೆಯಲ್ಲಿ ಹೆಚ್ಚಾಗಿ ತೊಡಗಿಸಬೇಕು.

(1) ಅವರು ಬಹುಬಗೆಯ ಅರ್ಥಮಾಡಿಕೊಳ್ಳುವ ಸಾಮರ್ಥ್ಯ ಹೊಂದಿದಾಗ ಮತ್ತು ಕೈಗಳನ್ನು ಸಕ್ರಿಯವಾಗಿ ಬಳಸುವಾಗ

(2) ಅವರು ತಮ್ಮ ನೋಟ್‌ಪುಸ್ತಕಗಳಲ್ಲಿ ಪದೇ ಪದೇ ಅಕ್ಷರಗಳನ್ನು ಪತ್ತೆ ಮಾಡಿ, ಅಕ್ಷರಗಳನ್ನು ಬರೆದಾಗ

(3) ಅವರು ಉತ್ತಮ ಯಾಂತ್ರಿಕ (Motor) ಕೌಶಲ್ಯಗಳನ್ನು ಹೊಂದುವುದರತ್ತ ಗಮನ ಕೇಂದ್ರೀಕರಿಸಿದಾಗ ಮಾತ್ರ

(4) ಶಿಕ್ಷಕರ ನಂತರ ಅವರು ಪ್ರಾಸಪದಗಳನ್ನು (rhymes) ಹಾಡುವಾಗ

118. ಈ ಮುಂದಿನ ಅಂಶಗಳಲ್ಲಿ ಯಾವುದು ಅಡಿಪಾಯದ ಹಂತದಲ್ಲಿ ಪಠ್ಯಪುಸ್ತಕವನ್ನು ರೂಪಿಸುವುದಕ್ಕೆ ಸಂಬಂಧಿಸಿದ ತತ್ವವಾಗಿರುವುದಿಲ್ಲ ?

(1) ಮಂಡನೆ ತತ್ವ (2) ವಾಸ್ತವಿಕ (ಮೂರ್ತ) ತತ್ವ

(3) ತಂತ್ರಜ್ಞಾನದ ತತ್ವ (4) ಪಠ್ಯಕ್ರಮ ತತ್ವ

119. ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (NCF) ನೀತಿಯಲ್ಲಿ ವಿವರಿಸಲಾದ ಸಕ್ಷಮ ಸಾಮರ್ಥ್ಯಗಳನ್ನು ಸಾಧಿಸುವ ವಿಷಯದಲ್ಲಿ ಪ್ರತಿಯೊಂದು ಮಗುವಿನ ಪಾಲ್ಗೊಳ್ಳುವಿಕೆಯನ್ನು ಬೆಂಬಲಿಸುವ ಎಲ್ಲವನ್ನೂ ಒಳಗೊಳ್ಳುವ, ಸ್ವಾಗತಾರ್ಹವಾದ ಮತ್ತು ಸಂತೋಷದ ವಾತಾವರಣವನ್ನು ನಿರ್ಮಿಸಲು ಈ ಕೆಳಕಂಡ ವಿಧಾನಗಳ ಮೂಲಕ ಉತ್ತಮವಾಗಿ ಮಾಡಬಹುದು :

(1) ಬಹುಮುಖ್ಯವಾಗಿ ಉತ್ತಮ ಆರೋಗ್ಯ ಮತ್ತು ಸನ್ನಡತೆಯ ಮೇಲೆ ಗಮನ ಕೇಂದ್ರೀಕರಿಸುವುದು.

(2) ಬೆಳವಣಿಗೆಯ ವಿಭಿನ್ನ ವಿಷಯಗಳಿಂದ ಮಕ್ಕಳ ಕೆಲಸವನ್ನು ಪ್ರದರ್ಶಿಸುವುದು.

(3) ವರ್ಣಮಯ ವಾತಾವರಣಕ್ಕಾಗಿ ಶಾಲೆಯನ್ನು ಅಲಂಕರಿಸುವುದು.

(4) ಒಳಾಂಗಣ ಕಾರ್ಯಚಟುವಟಿಕೆಗಳನ್ನು ನಡೆಸುವುದು ಮತ್ತು ಸುಡು ಬಿಸಿಲಿನಲ್ಲಿ ಹೊರಾಂಗಣ ಕ್ರೀಡೆಗಳನ್ನು ಆಡುವುದರಿಂದ ಅವರನ್ನು ತಪ್ಪಿಸುವುದು.

120. ಈ ಮುಂದಿನ ಅಂಶಗಳಲ್ಲಿ ಅಕ್ಷರಜ್ಞಾನವನ್ನು ಹೊಂದಲು ಯಾವ ಸಂಗತಿ ಹೆಚ್ಚು ಪ್ರಧಾನವಾಗಿರಬೇಕು ?

(1) ದೃಶ್ಯದಿಂದ ಸಾಧಿಸುವ ಶಬ್ದಕೋಶ ಮತ್ತು ಮಾದರಿಯನ್ನು ಗುರುತಿಸುವುದು

(2) ಸಂಕೇತದಲ್ಲಿರುವುದನ್ನು ಸಾಮಾನ್ಯ ಭಾಷೆಗೆ ತರುವುದು ಮತ್ತು ಭಾಷೆಯನ್ನು ಅರಿಯುವ ಸಾಮರ್ಥ್ಯ

(3) ಖಚಿತತೆ ಮತ್ತು ಧ್ವನಿಶಾಸ್ತ್ರಕ್ಕೆ ಸಂಬಂಧಿಸಿದಂತೆ ಗ್ರಹಿಸುವ ಸಾಮರ್ಥ್ಯ

(4) ಧ್ವನಿಶಾಸ್ತ್ರಕ್ಕೆ ಸಂಬಂಧಿಸಿದ ತಿಳುವಳಿಕೆ ಮತ್ತು ನಿರರ್ಗಳತೆ

Prepp
Your Personal Exams Guide

ಅಭ್ಯರ್ಥಿಗಳು ಕನ್ನಡವನ್ನು **ಭಾಷೆ–II** ಎಂದು ಆರಿಸಿಕೊಂಡಿದ್ದರೆ ಮಾತ್ರ **ಭಾಗ–V** ರಲ್ಲಿರುವ ಪ್ರಶ್ನೆಗಳನ್ನು (**ಪ್ರಶ್ನೆ ಸಂಖ್ಯೆ 121-150**) ಉತ್ತರಿಸಬೇಕು.

Candidates should attempt the questions from **Part-V (Q.No. 121-150)**, if they have opted **KANNADA** as **Language-II** only.

Prepp
Your Personal Exams Guide

# PART–V
## LANGUAGE-II
## KANNADA

| |
|---|
| ಅಭ್ಯರ್ಥಿಗಳು ಕನ್ನಡವನ್ನು **ಭಾಷೆ–II** ಎಂದು ಆರಿಸಿಕೊಂಡಿದ್ದರೆ ಮಾತ್ರ **ಭಾಗ–V** ರಲ್ಲಿರುವ ಪ್ರಶ್ನೆಗಳನ್ನು (ಪ್ರಶ್ನೆ ಸಂಖ್ಯೆ **121-150**) ಉತ್ತರಿಸಬೇಕು. |

**ನಿರ್ದೇಶನ : ಈ ಕೆಳಗಿನ ಲೇಖನ ಭಾಗವನ್ನು ಓದಿ, ಅನುಸರಿಸಿ ಬರುವ ಪ್ರಶ್ನೆಗಳಿಗೆ (ಪ್ರಶ್ನೆ ಸಂಖ್ಯೆ : 121–128) ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ.**

"ದೇವವಾಣಿಗೆ ಜನವಾಣಿಯಾಗುವುದು ಅಸಾಧ್ಯವಾದಾಗ, ಜನವಾಣಿಯನ್ನೇ ದೇವವಾಣಿಯ ಮಟ್ಟಕ್ಕೇರಿಸಿದ ಪವಾಡ ವೀರಶೈವ ವಚನಕಾರರದು" ಹೀಗೆಂದು ವಚನಗಳ ಹಿರಿಮೆಯನ್ನು ಗುರುತಿಸಿ ಪ್ರಬುದ್ಧವಾಗಿ "ಬಸವಣ್ಣನವರ ಷಟ್ ಸ್ಥಲದ ವಚನಗಳು" ಗ್ರಂಥದ ಸಂಕಲನ ಮಾಡಿ, ವಿದ್ವತ್‌ಪೂರ್ಣ, ಆಳವಾದ ವಿಮರ್ಶಾ ಒಳನೋಟಗಳನ್ನುಳ್ಳ 'ಪ್ರಸ್ತಾವನೆ' ಬರೆದು, ಕನ್ನಡಿಗರನ್ನು ವಚನಗಳತ್ತ ಸೆಳೆದವರು ಉತ್ತರ ಕರ್ನಾಟಕದಲ್ಲಿ ಜನಪ್ರಿಯರಾದ ಶಿವಲಿಂಗಪ್ಪ ಶಿವಯೋಗಪ್ಪ ಬಸವನಾಳರು.

ಶಿ.ಶಿ. ಬಸವನಾಳರು 1893ರ ನವೆಂಬರ್ 7ರಂದು ಹಾವೇರಿಯಲ್ಲಿ ಜನಿಸಿದರು. ತಂದೆ, ಶಿವಯೋಗಪ್ಪ ರೈಲ್ವೆ ಇಲಾಖೆಯಲ್ಲಿ 'ಸ್ಟೇಷನ್ ಮಾಸ್ತರ್' ಆಗಿದ್ದರು. ತಾಯಿ ಸಿದ್ದಮ್ಮ ದೈವಭಕ್ತರು, ಹಾವೇರಿ ಅಂದು ಹೈದರಾಬಾದ್ ಸಂಸ್ಥಾನಕ್ಕೆ ಸೇರಿದ್ದರಿಂದ ಬಸವನಾಳರು ತೆಲುಗಿನಲ್ಲಿ ಪ್ರಾಥಮಿಕ ಶಿಕ್ಷಣ ಪಡೆಯಬೇಕಾಯಿತು. ನಂತರ ಬಳ್ಳಾರಿಯ ವಾರ್ಡ್ ಹೈಸ್ಕೂಲು, ಗದಗ, ಧಾರವಾಡಗಳಲ್ಲಿ ಮಾಧ್ಯಮಿಕ ಶಿಕ್ಷಣ ಪಡೆದರು. ಉಚ್ಚ ಶಿಕ್ಷಣ ಪಡೆಯಲು ಪುಣೆಗೆ ಹೋಗಿ ಡೆಕ್ಕನ್ ಕಾಲೇಜು ಸೇರಿ ಬಿ.ಎ. ಪದವಿಯನ್ನು 1916 ರಲ್ಲಿ ಎಂ.ಎ. ಪದವಿಯನ್ನು ಪಡೆದರು.

ತಮ್ಮ ಶಿಕ್ಷಣ ಮುಗಿಸಿದವರೇ ಬಸವನಾಳರು ವೀರಶೈವ ವಿದ್ಯಾಭಿವೃದ್ಧಿ ಸಂಸ್ಥೆಯ ಆಜೀವ ಸದಸ್ಯರಾಗಿ ಅದರ ಉತ್ಕರ್ಷಣಕ್ಕೆ ಟೊಂಕ ಕಟ್ಟಿ ನಿಂತರು. ಅವರ ಪ್ರಯತ್ನದಿಂದ ವಿದ್ಯಾಭಿವೃದ್ಧಿ ಸಂಸ್ಥೆ ಬೆಳೆದು ಹಲವಾರು ತರುಣರಿಗೆ ವಿದ್ಯಾದಾನ ಮಾಡಿತು. ಬೆಳಗಾವಿಯಲ್ಲಿ ಲಿಂಗರಾಜ ಕಾಲೇಜು ಸ್ಥಾಪಿತವಾಗಲು ಡಾ. ನಂದೀಮಠರವರು ಅದರ ಪ್ರಾಂಶುಪಾಲರಾಗಿ, ಬಸವನಾಳರು ಅದರ ವೈಸ್ ಪ್ರಿನ್ಸಿಪಾಲ್ ಮತ್ತು ಪ್ರೊಫೆಸರಾದರು. ಶಾಲೆಗೆ ಕಟ್ಟಡ ಕಟ್ಟಿಸುವುದರಿಂದ ಆರಂಭಿಸಿ, ಅದರ ಸಮಸ್ತ ವ್ಯವಸ್ಥೆಯನ್ನೂ ಈ ಇಬ್ಬರೂ ಮಹನೀಯರು ಹಗಲೆನ್ನದೆ, ಇರುಳೆನ್ನದೆ, ಮಳೆಗಾಳಿಯೆನ್ನದೆ ನೋಡಿಕೊಂಡು ಕಾಲೇಜನ್ನು ಕರ್ನಾಟಕದ ಒಂದು ಉತ್ತಮ ಶಿಕ್ಷಣ ಸಂಸ್ಥೆಯನ್ನಾಗಿ ಬೆಳೆಸಿದರು. ಬಸವನಾಳರು "ಗಿಲಗಂಚಿ ಅರಟಾಳ ಹೈಸ್ಕೂಲ್" ಎಂಬ ವಿದ್ಯಾ ಸಂಸ್ಥೆಯನ್ನು ಸ್ಥಾಪಿಸಿದರು. ಅಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸಿದರು. ನಂತರ ಇಂಗ್ಲೀಷ್ ಶಾಲೆಯ ಅಧ್ಯಾಪಕರಾಗಿ, ಹೈಸ್ಕೂಲಿನ ಮುಖ್ಯೋಪಾಧ್ಯಾಯರಾಗಿ, ಕಾಲೇಜಿನ ಪ್ರಿನ್ಸಿಪಾಲರಾಗಿ ದುಡಿದರು. ಶಿಕ್ಷಣ ತಜ್ಞರಾದ ಅವರು ಮುಂಬಯಿ ವಿಶ್ವವಿದ್ಯಾನಿಲಯದ ಕನ್ನಡ ಪಠ್ಯಪುಸ್ತಕ ಸಮಿತಿಯಲ್ಲಿ ಸತತ ಇಪ್ಪತ್ತೈದು ವರ್ಷಗಳ ಕಾಲ ಸೇವೆ ಸಲ್ಲಿಸಿದರು. 'ಪ್ರಬೋಧ ಮಾಸ' ಪತ್ರಿಕೆಯನ್ನು 12 ವರ್ಷಗಳ ಕಾಲ ನಡೆಸಿದರು. ನಂತರ ಧಾರವಾಡದಲ್ಲಿ "ಜಯ ಕರ್ನಾಟಕ" ಪತ್ರಿಕೆ ಆಲೂರು ವೆಂಕಟರಾಯರಿಂದ ಆರಂಭವಾಗಿ ಆಗ ರಾಮಚಂದ್ರರಾಯರ ವಶದಲ್ಲಿತ್ತು. ಅದನ್ನು ಖರೀದಿಸಿ, ಅದೇ ಹೆಸರಿನ ಸಾಪ್ತಾಹಿಕವನ್ನು ಆರಂಭಿಸಿ ಮುನ್ನಡೆಸಿದರು.

ಅಂದು ಕರ್ನಾಟಕತ್ವದ ವಿಕಾಸಕ್ಕೆ ದುಡಿದ ಪ್ರಮುಖ ಪತ್ರಿಕೆ "ಜಯ ಕರ್ನಾಟಕ"ವನ್ನು ಸ್ಥಾಪಿಸಿದ ಆಲೂರು ವೆಂಕಟರಾಯರು ಕರ್ನಾಟಕದ ಏಕೀಕರಣಕ್ಕಾಗಿ ಶ್ರಮಿಸಿದವರು. ಈ ಪತ್ರಿಕೆ ಮೊದಲು ಮಾಸ ಪತ್ರಿಕೆಯಾಗಿದ್ದು, ಕರ್ನಾಟಕದ ಏಕೀಕರಣ ಚಳುವಳಿ ಮುಂದುವರೆದಂತೆಲ್ಲಾ ವಾರ ಪತ್ರಿಕೆಯಾಗಿ ಪರಿವರ್ತನೆಗೊಂಡಿತು. ಇದು "ಕರ್ನಾಟಕದ ವಾಸ್ತು ವಿದ್ಯೆಯಿಂದ ಹಿಡಿದು ಶರಣರ ತಿಳಿನಡೆ, ಧರ್ಮಶಾಸ್ತ್ರದ ಉತ್ಪತ್ತಿ ವಿಚಾರ, ಚಿತ್ರದುರ್ಗದ ಇತಿಹಾಸ, ವಿದೇಶಿ ಬಂಡವಾಳವು ನಮ್ಮ ಕೊರಳಿಗೆ ಉರುಳು" – ಹೀಗೆ ರಾಷ್ಟ್ರ ಪ್ರೇಮ, ಪರಂಪರೆ, ಇತಿಹಾಸ, ಸಾಹಿತ್ಯ ಎಲ್ಲವನ್ನೂ ಒಳಗೊಂಡಿತ್ತು.

ಅಂದಿನ ವಸಾಹತು ಶಕ್ತಿಯ ವಿರುದ್ಧ 'ಜಯ ಕರ್ನಾಟಕ' ಪತ್ರಿಕೆ ಮುಖಾಮುಖಿಯಾದ ನೆಲೆ ತುಂಬ ಪರಿಣಾಮಕಾರಿಯಾದುದ್ದಾಗಿತ್ತು. ಏಕೆಂದರೆ, ಈ ಪತ್ರಿಕೆಯಲ್ಲಿ ವಸಾಹತು ಸ್ಥಾಪಿಸಿದ ಎಲ್ಲ ರೀತಿಯ ಆಧುನಿಕ ಸವಾಲುಗಳನ್ನು ಎದುರಿಸುವ, ಆ ಮೂಲಕ ನಮ್ಮ

ಅನನ್ಯತೆಯನ್ನು ಕಂಡುಕೊಳ್ಳುವ ಪ್ರಯತ್ನ ಕಂಡು ಬರುತ್ತದೆ. ನಿದರ್ಶನಕ್ಕೆ– "ಹತ್ತಿಯ ಉದ್ಯೋಗ" ಎಂಬ ಲೇಖನದಲ್ಲಿ ಬಟ್ಟೆ ತಯಾರಿಸುವ ಯಂತ್ರಗಳ ವಿರುದ್ಧ ದನಿ ಎತ್ತಿ, ಕೈ ಮಗ್ಗಗಳು ಮುಂದುವರಿಯಬೇಕು. ಗೃಹ ಕೈಗಾರಿಕೆ ಬೆಳೆಯಬೇಕೆಂಬ ವಿಚಾರಗಳಿವೆ. ಇಂಥ ಅನೇಕ ದೇಸಿ ಚಿಂತನೆಗಳು ಪ್ರತಿ ಸಂಚಿಕೆಯಲ್ಲಿ ಮೂಡಿ ಬರುತ್ತಿತ್ತು. ಸಾಹಿತ್ಯಕ ಚಟುವಟಿಕೆಗಳ ಮೂಲಕವೂ ಸಹ "ಜಯ ಕರ್ನಾಟಕ" ಪತ್ರಿಕೆಯು ತನ್ನ ದೇಸಿ ಜ್ಞಾನ ಪರಂಪರೆಯನ್ನು ಆಧರಿಸಿ, ಪಾಶ್ಚಾತ್ಯ ಪ್ರಭಾವದ ವಿರುದ್ಧ ತನ್ನ ಸ್ವಂತಿಕೆಯನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ಪ್ರಯತ್ನಗಳನ್ನು ನಡೆಸಿದೆ. ಉದಾಹರಣೆಗೆ – "ವಚನ ಗ್ರಂಥಗಳ ಸ್ವರೂಪ," "ದಾಸರ ಕೀರ್ತನೆಗಳ ಪ್ರಾಶಸ್ತ್ಯ", "ಪಂಪನ ಕಾವ್ಯಗಳ ಮಹಿಮೆ" ಇತ್ಯಾದಿ ಲೇಖನಗಳು, ಅಲ್ಲದೆ, ಜನಪದ ಸಾಹಿತ್ಯವನ್ನು ಮುನ್ನಡೆಗೆ ತರುವುದರ ಮೂಲಕ, ಅರವಿಂದರ ವಿಚಾರಗಳು, ಗಾಂಧಿ ಚಿಂತನೆಗಳನ್ನು ಪ್ರಚುರ ಪಡಿಸುವುದರ ಮೂಲಕ, ಪತ್ರಿಕೆ ತನ್ನ ಸಾಂಸ್ಕೃತಿಕ ಪರಿಸರದಲ್ಲಿ ದೇಸಿ ಜ್ಞಾನ ಪರಂಪರೆಯ ಶೋಧನದ ಮೂಲಕ ವಸಾಹತು ಶಕ್ತಿಗೆ ಎದುರಾಗಿ ಆ ಮೂಲಕ ಕರ್ನಾಟಕತ್ವದ ವಿಕಾಸಕ್ಕೆ ಕಾರಣವಾಗಿದೆ. ಇದೆಲ್ಲದರ ಹಿಂದೆ ಶಿ.ಶಿ. ಬಸವನಾಳರ ಕನ್ನಡ ನಾಡು, ನುಡಿ, ಪ್ರೇಮ ಅವಿರತವಾಗಿ ಶ್ರಮಿಸಿದೆ.

**121.** ಜಯ ಕರ್ನಾಟಕ ಎಂಥಹ ಪತ್ರಿಕೆಯಾಗಿತ್ತು ?

(1) ಮಾಸಪತ್ರಿಕೆ, ನಂತರ ವಾರಪತ್ರಿಕೆ (2) ಮಾಸಪತ್ರಿಕೆ
(3) ದೈನಿಕ ಪತ್ರಿಕೆ (4) ವಾರಪತ್ರಿಕೆ

**122.** ಹಗಲೆನ್ನದೆ ಇರುಳೆನ್ನದೆ.. – ಎನ್ನುವ ಮಾತಿನ ಅರ್ಥ :

(1) ಹಗಲು ಮತ್ತು ರಾತ್ರಿ ಎಂದು ಕರೆಯದೆ
(2) ಹಗಲು ಹಾಗೂ ಇರುಳು ಗೊತ್ತಿಲ್ಲದಂತೆ
(3) ಒಂದು ಕ್ಷಣವೂ ವ್ಯರ್ಥಮಾಡದೆ
(4) ಎಲ್ಲಾ ಸಮಯದಲ್ಲಿ ಎಚ್ಚರ

**123.** ಶಿ.ಶಿ. ಬಸವನಾಳರು ಕೆಲಸ ಮಾಡಿದ ಕ್ಷೇತ್ರ ಯಾವುದು ?

(1) ವಚನಗಳು (2) ಕೀರ್ತನೆಗಳು (3) ಶತಕಸಾಹಿತ್ಯ (4) ವಚನಕಾರರು

**124.** 'ಟೊಂಕಕಟ್ಟು' – ಈ ನುಡಿಗಟ್ಟಿನ ಅರ್ಥ :

(1) ಸವಾಲು ಹಾಕು (2) ಸ್ಪರ್ಧೆಗೆ ಇಳಿ
(3) ಟೊಂಕವನ್ನು ಸರಿಮಾಡು (4) ದೃಢ ಮನಸ್ಸು ಮಾಡು

**125.** ಜಯ ಕರ್ನಾಟಕವು ಮಾಡಿದ ಮುಖ್ಯ ಕೆಲಸ :

(1) ಸಂಸ್ಕೃತಿ ಬೆಳೆಸುವ ಕೆಲಸ
(2) ಸಾಹಿತ್ಯ ಸಂವೇದನೆಯ ಕಾರ್ಯ
(3) ಮಹಾಪುರುಷರ ವ್ಯಕ್ತಿತ್ವ ಕುರಿತ ಚರ್ಚೆ
(4) ಕನಾಟಕತ್ವದ ವಿಕಾಸಕ್ಕೆ ಬೇಕಾದ ತಿಳುವಳಿಕೆ

**126.** ಬೆಳಗಾವಿ ಲಿಂಗರಾಜ ಕಾಲೇಜಿನ ಪ್ರಥಮ ಪ್ರಿನ್ಸಿಪಾಲರು ಯಾರು ?

(1) ಬಸವನಾಳರು (2) ಆಲೂರು ವೆಂಕಟರಾಯರು
(3) ಪಾವಟೆಯವರು (4) ನಂದೀಮಠ

**127.** 'ಹತ್ತಿಯ ಉದ್ಯೋಗ' ಎನ್ನುವ ಲೇಖನ ಏನನ್ನು ಹೇಳುತ್ತಿದೆ ?

(1) ಯಂತ್ರಗಳ ಮೂಲಕ ಹತ್ತಿ ಬಟ್ಟೆ ತಯಾರಿಸುವುದನ್ನು ವಿವರಿಸುತ್ತದೆ
(2) ಕೈಮಗ್ಗದ ಪರವಾಗಿ ವಾದ ಮಾಡುತ್ತದೆ.
(3) ಹತ್ತಿಯನ್ನು ತಯಾರಿಸುವ ಬಗ್ಗೆ ಹೇಳುತ್ತದೆ.
(4) ಹತ್ತಿಯ ಉದ್ಯೋಗ ಮಾಡುವ ಕಾರ್ಮಿಕರ ಸಂಕಷ್ಟ

Prepp
Your Personal Exams Guide

**128.** ಜಯ ಕರ್ನಾಟಕ ಪತ್ರಿಕೆಯು ಪ್ರಾರಂಭವಾಗಿದ್ದು ಯಾರಿಂದ ?

(1) ನಂದೀಮಠರು
(2) ಆಲೂರು ವೆಂಕಟರಾಯರು
(3) ಬಸವನಾಳರು
(4) ಹುಯಿಲಗೋಳ ನಾರಾಯಣರಾವ್

**ನಿರ್ದೇಶನ : ಈ ಕೆಳಗಿನ ಲೇಖನ ಭಾಗವನ್ನು ಓದಿ, ಅನುಸರಿಸಿ ಬರುವ ಪ್ರಶ್ನೆಗಳಿಗೆ (ಪ್ರಶ್ನೆ ಸಂಖ್ಯೆ : 129–135) ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ.**

ರಾತ್ರಿಯಾಗ ಸುಮಾರು ಎರಡು ಘಂಟೆ. ಕಲಿಕಯ ಆ ನಟ್ಟಿರುಳ ಮೌನದ ಕಡಲಲ್ಲಿ ಒಂದಿಷ್ಟು ತೆರೆಯೆಬ್ಬಿಸಿ ದೊಡ್ಡ ಜೋಡು ಕುದುರೆಯ ಸಾರೋಟೊಂದು ಭವಾನೀಪುರದ ದಿಕ್ಕಿನಿಂದ ಬಂದು ಬಿರ್ಜಿತಲಾದ ತಿರುಗಣೆಯ ಬಳಿ ನಿಂತುಕೊಂಡಿತು. ಅಲ್ಲೊಂದು 'ರಿಕ್ಷಾ' ಗಾಡಿಯನ್ನು ಕಂಡು ಸಾರೋಟಿನಲ್ಲಿದ್ದೊಬ್ಬ ವ್ಯಕ್ತಿ ಕರೆದು ಹತ್ತಿರ ತರಿಸಿದ. ಅವನ ಪಕ್ಕದಲ್ಲಿ ಕೋಟು, ಹ್ಯಾಟು ತೊಟ್ಟ, ಬಂಗಾಳಿ ಯುವಕನೊಬ್ಬ ಎದುರಿನ ಆಸನದ ಮೇಲೆ ಕಾಲುನೀಡಿ ಸ್ವಲ್ಪ ಅಮಲೇರಿದ ಅವಸ್ಥೆಯಲ್ಲಿ ಕೊರಳು ಬಾಗಿಸಿ ನಿದ್ದೆ ಮಾಡುತ್ತಿದ್ದ. ಈ ಯುವಕ ಅದೇ ತಾನೆ ವಿಲಾಯತಿಯಿಂದ ಮರಳಿದ್ದ. ಅವನ ಸತ್ಕಾರಕ್ಕಾಗಿ ಗೆಳೆಯರೊಬ್ಬರ ಮನೆಯಲ್ಲಿ ಊಟದ ವ್ಯವಸ್ಥೆ ಯಾಗಿತ್ತು. ಆ ಸಮಾರಂಭದಿಂದ ಮನೆಗೆ ಹೋಗುವಾಗ ಬೇರೊಬ್ಬ ಗೆಳೆಯ ಅವನನ್ನು ಸ್ವಲ್ಪ ದೂರ ಬಿಟ್ಟು ಬರಲು ತನ್ನ ಸ್ವಂತ ಗಾಡಿಯಲ್ಲಿ ಕೂಡಿಸಿಕೊಂಡು ಬಂದ, ರಿಕ್ಷಾ  ಗಾಡಿ ಬಂದೊಡನೆ ಆ ಗೆಳೆಯ ಅವನನ್ನು ಒಂದೆರಡು ಸಲ ಮೈಯಲುಗಿಸಿ ಎಚ್ಚರಿಸಿದ. "ಏಯ್, ಮಜುಮ್‌ದಾರ್ ...ಏಳಿ, ಗಾಡಿ ಸಿಕ್ಕಿತು. ಮನೆಗೆ ಹೋಗಿ" ಎಂದ. ಮಜುಮ್‌ದಾರ ಬೆಚ್ಚಿ ಎಚ್ಚರನಾಗೆದ್ದು ಹಸನಾದ ವಿಲಾಯತಿಯ ಬೈಗಳನ್ನು ಗೊಣಗಿಕೊಳ್ಳುತ್ತ ಬಾಡಿಗೆ ಗಾಡಿಯಲ್ಲಿ ಹೋಗಿ ಏರಿ ಕೂತ, ಗಾಡಿಯವನಿಗೆ ಯುವಕನ ಮನೆಯ ವಿಳಾಸವನ್ನು ಚೆನ್ನಾಗಿ ಹೇಳಿ ಸಾರೋಟಿನ ಗೆಳೆಯ ತನ್ನ ಮನೆಯ ದಾರಿ ಹಿಡಿದ.

ರಿಕ್ಷಾ ಗಾಡಿ ಸ್ವಲ್ಪ ದೂರ ನೇರವಾಗಿ ಹೋಗಿ ಪಾರ್ಕ್ ಸ್ಟ್ರೀಟಿನ ಎದುರುಗಡೆ ಮೈದಾನದ ರಸ್ತೆಯ ತಿರುಗಣೆ ಕಡೆ ಬಂತು. ಮಜುಮ್‌ದಾರನು ಇನ್ನೊಮ್ಮೆ ಇಂಗ್ಲಿಷಿನಲ್ಲಿ ಶಪಿಸುತ್ತ ತನ್ನಲ್ಲೇ ಇದೇನಿದು, "ಇದು ನನ್ನ ಮನೆ ದಾರಿಯಲ್ಲ" ಎಂದುಕೊಂಡ. ಆಮೇಲೆ ನಿದ್ದೆಯ ಮಂಪರಿನಲ್ಲೇ ಇರಬೇಕು.  "ಇದೇ ಸರಿಯಾದ ದಾರಿ" ಅಂದುಕೊಂಡ.

ಮೈದಾನವನ್ನು ಹೊಕ್ಕೊಡನೆ ಮಜುಮ್‌ದಾರನ ಮೈಯೆಲ್ಲಾ ಏನೋ ಒಂದು ಬಗೆಯಾಯಿತು. ಹಠಾತ್ತಾಗಿ ಅವನಿಗೆನ್ನಿಸಿತು, ಒಳಗೆ ತನ್ನನ್ನು ಬಿಟ್ಟು ಬೇರೊಬ್ಬ ಮನುಷ್ಯರಿಲ್ಲ, ಆದರೂ ತನ್ನ ಪಕ್ಕದಲ್ಲಿನ ಖಾಲಿ ಜಾಗ ಭರ್ತಿಯಾಗುತ್ತಿದೆ, ಆ ಖಾಲಿ ಜಾಗದ ಶೂನ್ಯ ಆಕಾಶ ಆಕಾರ ತಾಳಿ ಅವನನ್ನು ಒತ್ತಿ ತಳ್ಳುತ್ತಿರುವಂತೆ ಅನ್ನಿಸುತ್ತಿದೆ. ಮಜುಮ್‌ದಾರನಾಗ "ಇದೇನು ವಿಚಿತ್ರ, ಈ ಗಾಡಿ ನನ್ನನ್ನು ಈ ರೀತಿ ಚುಡಾಯಿಸುತಾಯಿದೆ." ಎಂದುಕೊಂಡ.

"ಏಯ್, ಗಾಡಿವಾಲಾ, ಗಾಡೀವಾಲಾ!" ಎಂದು ಕೂಗಿದ. (ಗಾಡಿಯವನು ಜವಾಬೇನೂ ಕೊಡಲಿಲ್ಲ.) ಆಗ ಅವನು ಹಿಂದುಗಡೆ ಕಿಡಿಕಿಯನ್ನು ತೆರೆದು ಹಿಂದೆ ಕೂತಿದ್ದ ಸೈಸ್ (Syce) ಕುದುರೆಯ ಚಾಕರನ ಕೈಹಿಡಿದು "ನೀನು ಒಳಗೆ ಬಂದು ಕೂಡು (ತುಮ್ ಭೀತರ್ ಆಕೆ ಬೈಠೊ) ಎಂದ.

ಆ ಚಾಕರ ಹೆದರಿ ಇಲ್ಲ, ಬಾಬುಜಿ, "ನಾನು ಒಳಗೆ ಬರುವುದಿಲ್ಲ" ಎಂದು ಬಿಟ್ಟ. (ನಹೀ, ಬಾಬುಜಿ, ಭೀತರ್ ನಹೀ ಜಾಯಗಾ.) ಅದನ್ನ ಕೇಳಿ ಮಜುಮ್‌ದಾರನ ಮೈಯುರಿದು ಜೋರಾಗಿ ಆ ಚಾಕರನ ಕೈಹಿಡಿದು "ಜಲ್ದೀ ಭೀತರ್ ಆವೋ" ಎಂದು ಗದರಿದ.

ಆ ಆಳು ಬಲವಾಗಿ ಕೈ ಬಿಡಿಸಿಕೊಂಡು ಕೆಳಗಿಳಿದು ಓಡಿಹೋದ. ಆಗ ಮಜುಮ್‌ದಾರನು ಪಕ್ಕದ ಸೀಟಿನ ಕಡೆ ಧಿಗಿಲಿನಿಂದ ನೋಡಹತ್ತಿದ. ಏನೂ ಕಂಡು ಬರಲಿಲ್ಲ. ಆದರೂ ಯಾವುದೋ ಘನವಾದ ಪದಾರ್ಥ ಆ ಜಾಗವನ್ನಾಕ್ರಮಿಸಿ ಭದ್ರವಾಗಿ ಕೂತು ಬಿಟ್ಟಿರುವಂತೆ ಅನ್ನಿಸಿತು. ಹೇಗೋ ಕೊರಳಲ್ಲಿ ದನಿ ಎಳೆದು ತಂದುಕೊಂಡು ಮಜುಮ್‌ದಾರನು "ಏಯ್, ಗಾಡೀವಾಲಾ, ಗಾಡಿ ರೋಖೋ" ಎಂದು ಕೂಗಿದ. ಅವನಿಗಾಗನ್ನಿಸಿತು, ಗಾಡಿ ವಾಲನು ಎದ್ದು ನಿಂತು ಎರಡು ಕೈಗಳಿಂದಲೂ ಲಗಾಮನ್ನು ಎಳೆದು ಕುದುರೆಗಳನ್ನು ನಿಲ್ಲಿಸಲು ಯತ್ನಿಸಿದನಂತೆ.

**129.** ಮಜುಮ್‌ದಾರನಿಗೆ ಗಾಡಿಯಲ್ಲಿ ಬಂದ ಅನುಭವ ಏನು ?

(1) ಯಾರೋ ಒತ್ತಿದ ಹಾಗೆ

(2) ಶೂನ್ಯದಲ್ಲಿ ಏನೋ ಕಂಡಹಾಗೆ

(3) ತಾನು ಕುಳಿತ ಪಕ್ಕದ ಖಾಲಿ ಜಾಗ ತುಂಬಿದ ಹಾಗೆ

(4) ದೆವ್ವವು ಬಂದ ಹಾಗೆ

**130.** ಮಜುಮ್‌ದಾರನಿಗೆ ದಾರಿ ಏಕೆ ಗೊತ್ತಾಗುತ್ತಿರಲಿಲ್ಲ ?

(1) ಕತ್ತಲೆಯಲ್ಲಿ ಕಾಣುತ್ತಿರಲಿಲ್ಲ (2) ಚೆನ್ನಾಗಿ ಮದಿರೆ ಸೇವಿಸಿದ್ದ

(3) ಊರಿಗೆ ಹೊಸಬ (4) ಗಾಡಿ ಜೋರಾಗಿ ಓಡುತ್ತಿತ್ತು

**131.** ಗಾಡಿ ಓಡಿಸುವ ಆಳು ಇವನಿಗೆ ಹೇಗೆ ಕಂಡ ?

(1) ಗಾಡಿ ಲಗಾಮು ಎಳೆದು ಗಾಡಿ ನಿಲ್ಲಿಸಿದಂತೆ

(2) ಸಿಟ್ಟಿನಲ್ಲಿ ಇರುವಂತೆ

(3) ಹೆದರಿಕೊಂಡಂತೆ

(4) ಓಡುವವನಂತೆ

**132.** ಗಾಡಿಯಲ್ಲಿ ಯುವಕನನ್ನು ಕೂಡಿಸಿಕೊಂಡು ಬಂದವನು ಯಾರು ?

(1) ಇನ್ನೊಬ್ಬ ಗೆಳೆಯ

(2) ರಿಕ್ಷಾ ಗಾಡಿಯವನು

(3) ಆಗಂತುಕ

(4) ಅವನ ಸತ್ಕಾರಕ್ಕಾಗಿ ಊಟ ಏರ್ಪಡಿಸಿದವನು

**133.** 'ವಿಲಾಯಿತಿ' – ಪದದ ಅರ್ಥ :

(1) ಪಕ್ಕದ ದೇಶ (2) ರಿಯಾಯಿತಿ (3) ಬುಡಕಟ್ಟು ಪ್ರದೇಶ (4) ಪರದೇಶ

**134.** ಬಂಗಾಳಿ ಯುವಕನ ವರ್ಣನೆಯನ್ನು ಇಲ್ಲಿ ಹೇಗೆ ಮಾಡಲಾಗಿದೆ ?

(1) ಶಿಸ್ತಿನ ಮನುಷ್ಯನಂತೆ

(2) ಪಶ್ಚಿಮದವರ ಅನುಕರಣೆ ಮಾಡುವವನು

(3) ಕುಡುಕನಂತೆ

(4) ಶ್ರೀಮಂತನಂತೆ

**135.** 'ತೆರೆಯೆಬ್ಬಿಸಿ' – ಈ ಪದದಲ್ಲಿನ ಸಂಧಿ :

(1) ಗುಣಸಂಧಿ (2) ಆದೇಶಸಂಧಿ (3) ಆಗಮಸಂಧಿ (4) ಲೋಪಸಂಧಿ

136. ಈ ಕೆಳಕಂಡ ವಿಧಾನದಲ್ಲಿ ದ್ವಿತೀಯ ಭಾಷೆಯನ್ನು ಕಲಿಯುವ ಉತ್ತಮ ವಿಧಾನ ಯಾವುದು ?
   (1) ತಮ್ಮದೇ ಸ್ವಂತ ಸಮುದಾಯದಲ್ಲಿರುವ ಸ್ಥಳೀಯ ಭಾಷಿಕರೊಂದಿಗೆ ನಿಕಟವಾಗಿ ಸಂಪರ್ಕದಲ್ಲಿರುವ ಮೂಲಕ.
   (2) ಶ್ರವ್ಯ–ಭಾಷಾ ವಿಧಾನದಲ್ಲಿರುವಂತೆ ಸಂಭಾಷಣೆಯನ್ನು ಪುನರುಚ್ಚರಿಸುತ್ತಾ ಅಭ್ಯಾಸ ಮಾಡುವುದು.
   (3) ಉದ್ದೇಶಿತ ಭಾಷೆಯಲ್ಲಿ ಮಾತನಾಡುವ ತರಗತಿಗಳಿಗೆ ಸೇರುವುದು.
   (4) ತರಗತಿಯಲ್ಲಿ ವ್ಯಾಕರಣದ ಮೇಲೆ ನೀವು ಹೆಚ್ಚು ಗಮನ ಕೇಂದ್ರಿಕರಿಸಿ ಮತ್ತು ಶಿಕ್ಷಕರ ಸಹಾಯ ಪಡೆದು ಕಲಿಯಬಹುದು.

137. ಓದುವುದನ್ನು ಕಲಿಯುವ ವಿಷಯದಲ್ಲಿ ಉದ್ಭವಿಸುವ ದೊಡ್ಡ ಸವಾಲೆಂದರೆ, ಪ್ರೇರಣೆಯನ್ನು ಮತ್ತು ಉತ್ತಮ ಮಕ್ಕಳ ಸಾಹಿತ್ಯವನ್ನು ಹುಡುಕುವುದು. ಈ ಸಮಸ್ಯೆಯನ್ನು ಪರಿಹರಿಸಲು :
   (1) ಮನೆಗಳಲ್ಲಿಯೇ ಒಂದು ಸಣ್ಣ ಗ್ರಂಥಾಲಯವನ್ನು ಸ್ಥಾಪಿಸಲು ಪೋಷಕರು ಪ್ರೋತ್ಸಾಹ ನೀಡಬೇಕು.
   (2) ಓದುವ ಬಗ್ಗೆ ಪ್ರೇರೇಪಣೆ ನೀಡಲು ಮತ್ತು ಆಸಕ್ತಿ ಮೂಡುವಂತೆ ಮಾಡಲು ಮಕ್ಕಳ ಸಾಹಿತ್ಯ ಸುಲಭವಾಗಿ ದೊರೆಯುವಂತೆ ಮಾಡುವುದು.
   (3) ಶಾಲಾ ಅಧಿಕಾರಿಗಳು ಮಕ್ಕಳಲ್ಲಿ ಪುಸ್ತಕ ಓದುವುದನ್ನು ಪ್ರೇರೇಪಿಸಲು ಮತ್ತು ಆಸಕ್ತಿ ಮೂಡಿಸಲು ಅವರನ್ನು ಪುಸ್ತಕ ಪ್ರದರ್ಶನಗಳಿಗೆ ಕರೆದುಕೊಂಡು ಹೋಗಬೇಕು.
   (4) ಶಿಕ್ಷಕರು ಪ್ರತಿದಿನ ಮನೆಗೆಲಸವಾಗಿ ಒಂದು ಪುಸ್ತಕವನ್ನು ಓದುವಂತೆ ಮಕ್ಕಳಿಗೆ ಪ್ರೇರೇಪಣೆ ಮಾಡುವುದು.

138. ಶಿಕ್ಷಕರು Vನೇ ತರಗತಿಯ ವಿದ್ಯಾರ್ಥಿಗಳಿಗೆ ಕತೆಯನ್ನು ವೇಗವಾಗಿ ಓದುವಂತೆ ಹೇಳಬೇಕು ಮತ್ತು ಕ್ರಮವಾಗಿ ನಾಲ್ಕು ಚಿತ್ರಗಳನ್ನು ಇಡಬೇಕು. ಈ ಚಟುವಟಿಕೆಯ ಉದ್ದೇಶ :
   (1) ಸಂಕ್ಷಿಪ್ತವಾಗಿ ಓದುವ ವಿಷಯದಲ್ಲಿ ಅಭ್ಯಾಸ ಮಾಡಲು ಅವರಿಗೆ ನೀಡುವುದು.
   (2) ನಿರ್ದಿಷ್ಟ ಮಾಹಿತಿಗಾಗಿ ಓದುವ ವಿಷಯದಲ್ಲಿ ಅಭ್ಯಾಸ ಮಾಡಲು ನೀಡುವುದು.
   (3) ಕತೆಯ ಹೊಸ ಮತ್ತು ಕಷ್ಟಕರವಾದ ಪದಗಳನ್ನು ಪರಿಷ್ಕರಿಸಲು.
   (4) ಚಿತ್ರದ ಕಾರ್ಡ್‌ಗಳನ್ನು ಜೋಡಿಸುವುದು.

139. ಪ್ರಾಥಮಿಕ ಹಂತದಲ್ಲಿ ಓದುವ ಕೌಶಲ್ಯತೆಯನ್ನು ನಿರ್ಧರಿಸುವುದಕ್ಕಾಗಿ, ಭಾಷಾ ಶಿಕ್ಷಕರು ಅತಿಮುಖ್ಯವಾಗಿ ಈ ಮುಂದಿನ ಅಂಶಗಳ ಮೇಲೆ ಗಮನ ಕೇಂದ್ರಿಕರಿಸಬೇಕು :
   (1) ವಿರಾಮ ಚಿಹ್ನೆಗಳನ್ನು ಬಳಸುವುದು.
   (2) ಸರಿಯಾದ ವೇಗದೊಂದಿಗೆ ಓದುವುದು.
   (3) ಅರ್ಥಮಾಡಿಕೊಂಡು ಓದುವುದು.
   (4) ವರ್ಣಮಾಲೆಯ ಅಕ್ಷರಗಳನ್ನು ಗುರುತಿಸುವುದು.

140. ಉತ್ತಮವಾಗಿ ಮಾತನಾಡುವ ಚಟುವಟಿಕೆಯು ಈ ಮುಂದಿನವುಗಳಲ್ಲಿ ಒಂದಾಗಿದೆ. ಅದು :
   (1) ಕಲಿಯುವವರು ಚೆನ್ನಾಗಿ ಆಲಿಸಿದಾಗ
   (2) ಕಲಿಯುವವರು ಹೆಚ್ಚಾಗಿ ಮಾತನಾಡಿದಾಗ
   (3) ಮುಕ್ತವಾಗಿ ಮಾತನಾಡುವ ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆಯು ಗರಿಷ್ಠ ಮಟ್ಟಕ್ಕೆ ತಲುಪಿದಾಗ
   (4) ಶಿಕ್ಷಕರು ಹೆಚ್ಚು ಹೆಚ್ಚು ವಿವರಿಸಿದಾಗ

**141.** ಪ್ರಾರಂಭದ ಹಂತದಲ್ಲಿ ಮೌಲ್ಯನಿರ್ಧಾರಣಾ ಸಾಧನಗಳು ಮತ್ತು ಪ್ರಕ್ರಿಯೆಗಳನ್ನು ಈ ಕೆಳಕಂಡಂತಹ ವಿಧಾನದಲ್ಲಿ ವಿನ್ಯಾಸಗೊಳಿಸಬೇಕು :

(1) ಅವು ಮಗುವಿನ ಕಲಿಕಾ ಅನುಭವಗಳ ಸಹಜ ಮುಂದುವರಿಕೆಯಂತೆ ಇರಬೇಕು.

(2) ಕಲಿಯುವವನ ಪ್ರಗತಿಯನ್ನು ಒಟ್ಟಾರೆ ತರಗತಿಯ ಕಾರ್ಯಕ್ಷಮತೆಯೊಂದಿಗೆ ವಿವರಿಸಿ ವಿಶ್ಲೇಷಿಸಬೇಕು.

(3) ಶಿಕ್ಷಕರು ಕಲಿಯುವರೆಲ್ಲರ ಸಾಧನೆಯನ್ನು ಮೌಲ್ಯನಿರ್ಧರಣೆ ಮಾಡಲು ಒಂದೇ ಮಾದರಿಯನ್ನು ಬಳಸಬೇಕು.

(4) ಕಿರು ಪರೀಕ್ಷೆಗಳು ಮತ್ತು ಪರೀಕ್ಷೆಗಳು ಕಲಿಯುವವರಿಗೆ ಹೆಚ್ಚು ಸೂಕ್ತವಾಗಿರುವಂತೆ ಇರಬೇಕು.

**142.** ಮುದ್ರಿತ ಪುಸ್ತಕಗಳ ಜೊತೆಗೆ ಧ್ವನಿಮುದ್ರಿಕೆಯ ಪುಸ್ತಕಗಳು ಮತ್ತು ಸಣ್ಣ ವಿದ್ಯಾರ್ಥಿಗಳ ಸ್ಪರ್ಷ ಸಾಮರ್ಥ್ಯಗಳಲ್ಲಿ ತೊಡಗಿಸುವ ಪುಸ್ತಕಗಳು ತರಗತಿಯ ಭಾಗವಾಗಬೇಕು. ಏಕೆಂದರೆ :

(1) ಇದು ಶಿಕ್ಷಕರಿಗೆ ಮೌಲ್ಯಮಾಪನಕ್ಕಾಗಿ ಬೇರೆ ಬೇರೆ ಪುಸ್ತಕಗಳನ್ನು ಬಳಸುವ ಸ್ವಾತಂತ್ರ್ಯವನ್ನು ನೀಡುತ್ತದೆ.

(2) ವಿಭಿನ್ನ ವಿಷಯಗಳನ್ನು ಕಲಿಯಲು ಇಚ್ಛಿಸುವವರಿಗೆ ಪುಸ್ತಕಗಳು ಹೆಚ್ಚು ಅವಕಾಶಗಳನ್ನು ಕಲ್ಪಿಸುತ್ತವೆ.

(3) ಈ ಪುಸ್ತಕಗಳು ಶಿಕ್ಷಕರ ಮೇಲೆ ಹೆಚ್ಚಿನ ಹೊರೆಯನ್ನು ಉಂಟುಮಾಡುವುದಿಲ್ಲ.

(4) ಇದು ತರಗತಿಯಲ್ಲಿ ವೈವಿಧ್ಯಮಯ ವಾತಾವರಣವನ್ನು ಉಂಟುಮಾಡುತ್ತದೆ ಮತ್ತು ಮಕ್ಕಳು ಅಂಥ ವೈವಿಧ್ಯತೆಯ ಕೆಲಸಗಳನ್ನು ಮಾಡಲು ಇಷ್ಟಪಡುತ್ತಾರೆ.

**143.** ಭಾಷಾ ಕಲಿಕೆಯು ಒಂದು ಸಾಂದ್ರೀಕೃತ (intensive) ಪ್ರಕ್ರಿಯೆಯಾಗಿದ್ದು, ಅದು ಹುಟ್ಟಿದಾಗ ಪ್ರಾರಂಭವಾಗಿ, ಜೀವನದುದ್ದಕ್ಕೂ ಮುಂದುವರೆಯುತ್ತದೆ.

ಮೇಲ್ಕಂಡ ಹೇಳಿಕೆಯನ್ನು ನೀವು ಒಪ್ಪುವಿರಾ ಅಥವಾ ನಿರಾಕರಿಸುವಿರಾ ?

(1) ನಾನು ಈ ಹೇಳಿಕೆಯನ್ನು ಒಪ್ಪುವುದಿಲ್ಲ.

(2) ನಾನು ಈ ಹೇಳಿಕೆಯನ್ನು ಭಾಗಶಃ ಒಪ್ಪುತ್ತೇನೆ.

(3) ನಾನು ಈ ಹೇಳಿಕೆಯನ್ನು ಭಾಗಶಃ ಒಪ್ಪುವುದಿಲ್ಲ.

(4) ನಾನು ಈ ಹೇಳಿಕೆಯನ್ನು ಒಪ್ಪುತ್ತೇನೆ.

**144.** ಕಲಿಯುವವರು ವ್ಯಾಕರಣ ನಿಯಮಗಳನ್ನು ಮತ್ತು ಪದಕೋಶವನ್ನು ಕಂಠಪಾಠ ಮಾಡುತ್ತಿದ್ದಾರೆ ಮತ್ತು ತಮ್ಮ ಮಾತೃಭಾಷೆಯಲ್ಲಿ ಹೆಚ್ಚಿನ ಪ್ರಮಾಣದ ಕೆಲಸ ಮಾಡುತ್ತಿದ್ದಾರೆ. ಶಿಕ್ಷಕರು ತಮ್ಮ ಭಾಷಾ ತರಗತಿಯಲ್ಲಿ ಯಾವ ವಿಧಾನವನ್ನು ಬಳಸುತ್ತಿದ್ದಾರೆ ?

(1) ಸ್ವಾಭಾವಿಕ ಪ್ರಸ್ತಾವನೆ (approach) (2) ಸಂವಹನಶೀಲ ಬೋಧನೆ

(3) ವ್ಯಾಕರಣ ಭಾಷಾಂತರ (4) ನೇರ ವಿಧಾನ

**145.** ಮಕ್ಕಳ ಜ್ಞಾನಗ್ರಹಣದ ಬೆಳವಣಿಗೆ ಮತ್ತು ಭಾಷಾ ಕಲಿಕೆಯ ಬೆಳವಣಿಗೆಯು :

(1) ಪ್ರತಿಯೊಬ್ಬ ವ್ಯಕ್ತಿಯೂ ಭಾಷೆಯಲ್ಲಿ ಪಾರಂಗತನಾಗುವ ಸಾಧನದೊಂದಿಗೆ ಜನಿಸಿರುತ್ತಾನೆ.

(2) ಬೆಳವಣಿಗೆಗೆ ಯಾವುದೇ ಸಂಬಂಧ ಇಲ್ಲ.

(3) ಮಕ್ಕಳು ಜೀವಿಸಿರುವ ಸಂಸ್ಕೃತಿ ಸಮುದಾಯಗಳಿಗೆ ನಿಕಟವಾಗಿ ಸಂಬಂಧಪಟ್ಟಿರುತ್ತದೆ.

(4) ಪ್ರಚೋದನೆ – ಪ್ರತಿಕ್ರಿಯೆ (Stimulus-Response) ಮತ್ತು ಅನುಕರಣೆ ಪ್ರಕ್ರಿಯೆಯ ಸಂಯೋಜನೆಯ ತತ್ವಕ್ಕೆ ಸಂಬಂಧಿಸಿದೆ.

**146.** ಇಡೀ ಭಾಷಾ ಪ್ರಸ್ತಾವನೆ (approach) ಎಂದರೆ :
(1) ಕೌಶಲ್ಯತೆ ಆಧಾರಿತ
(2) ಸಂಯೋಜಿತ ಶಬ್ದಗಳು
(3) ಶಬ್ದ–ಸಂಕೇತಗಳ ಸಂಬಂಧವನ್ನು ಊಹಿಸುವುದು
(4) ಅರ್ಥ ಆಧಾರಿತ

**147.** ಮಕ್ಕಳು ತಮ್ಮ ಸುತ್ತಲೂ ಎರಡು ಭಾಷೆಗಳನ್ನು ಕೇಳುತ್ತಾರೆ, ಹೀಗೆ ಎರಡು ಭಾಷೆಗಳನ್ನು ಕೇಳುವುದರಿಂದ :
(1) ಮಕ್ಕಳಿಗೆ ಅನುಕೂಲವಾಗುತ್ತದೆ.
(2) ಯಾವುದೇ ವ್ಯತ್ಯಾಸವಾಗುವುದಿಲ್ಲ.
(3) ಅರ್ಥಮಾಡಿಕೊಳ್ಳಲು ಅವರಿಗೆ ಗೊಂದಲವಾಗುತ್ತದೆ.
(4) ಮಕ್ಕಳಿಗೆ ಅನಾನುಕೂಲವಾಗುತ್ತದೆ.

**148.** ಈ ಕೆಳಕಂಡ ಓದುವ ವಿಧಾನವು ಕೆಲವು ಕಲಿಕಾ ಗುರಿಗಳನ್ನು ಮತ್ತು ಚಟುವಟಿಕೆಗಳನ್ನು ಹೊಂದಿದೆ. ಕಲಿಯುವವರು ಪಠ್ಯವನ್ನು ಏಕಾಗ್ರಚಿತ್ತದಿಂದ ಮತ್ತು ವಿವರವಾಗಿ ಸೂಕ್ತ ಎಚ್ಚರಿಕೆಯಿಂದ ಓದಬೇಕಾಗುತ್ತದೆ. ಈ ಓದುವಿಕೆಯು :
(1) ಸೂಕ್ಷ್ಮವಾಗಿ ಓದುವುದು (Intensive reading)
(2) ನಿರ್ದೇಶಿತ ಓದುವಿಕೆ (Guided reading)
(3) ಸಂತೋಷದಿಂದ ಓದುವುದು (Pleasure reading)
(4) ಸ್ಥೂಲವಾಗಿ ಓದುವಿಕೆ (Extensive reading)

**149.** ಪಾಠದ ಪ್ರಾರಂಭದಲ್ಲಿ, ಶಿಕ್ಷಕರು ತರಗತಿಯನ್ನು ಗುಂಪುಗಳಾಗಿ ವಿಂಗಡಿಸಿದರು ಮತ್ತು ಅವರು ಆಗ ತಾನೇ ಓದಿರುವ ವೃತ್ತಪತ್ರಿಕೆಯ ಒಂದು ಆಸಕ್ತಿಕರವಾದ ಲೇಖನದ ಬಗ್ಗೆ ಮಾತನಾಡಲು ತಿಳಿಸಿದರು. ಈ ಬಗೆಯ ಮಾತನಾಡುವ ಕಾರ್ಯಚಟುವಟಿಕೆಯನ್ನು ಯಾವ ಉದ್ದೇಶಕ್ಕಾಗಿ ಮಾಡಲಾಗುತ್ತದೆ ?
(1) ನಿಯಂತ್ರಿತ ವಾಚನ ಮಾಡುವ ಅಭ್ಯಾಸಕ್ಕಾಗಿ
(2) ನಿರ್ದೇಶಿತ ವಾಚನ ಮಾಡುವ ಅಭ್ಯಾಸಕ್ಕಾಗಿ
(3) ಸಕ್ರಿಯವಾಗಿ ಆಲಿಸುವುದಕ್ಕಾಗಿ
(4) ನಿರರ್ಗಳವಾಗಿ ಮಾತನಾಡುವ ಅಭ್ಯಾಸಕ್ಕಾಗಿ

**150.** ವಿದ್ಯಾರ್ಥಿಗಳು, ಶಿಕ್ಷಕರು ನೀಡಿದ ಮಾದರಿ ವಾಕ್ಯಗಳನ್ನು ಪುನರುಚ್ಚರಿಸುವ ಮೂಲಕ ಭಾಷಾ ಮಾದರಿಗಳನ್ನು ಕಲಿತರು. ಅವರು ನುಡಿಗಟ್ಟುಗಳನ್ನು ಕಂಠಪಾಠ ಮಾಡಿದರು ಮತ್ತು ಅವರು ಭಾಷಾಭ್ಯಾಸವನ್ನು ಸರಿಯಾಗಿ ನಿರ್ವಹಿಸಿದಾಗ ಅವರ ಶಿಕ್ಷಕರಿಂದ ಸಕಾರಾತ್ಮಕವಾಗಿ ಪ್ರೋತ್ಸಾಹ ದೊರೆಯಿತು.
(1) ಸಂವಹನಶೀಲ ಪ್ರಸ್ತಾವನೆ (approach)
(2) ಒಟ್ಟು ಭೌತಿಕ ಪ್ರತಿಕ್ರಿಯೆ
(3) ರಾಚನಿಕ ಪ್ರಸ್ತಾವನೆ (approach)
(4) ಕೇಳಿಸುವ ಮೂಲಕ ಭಾಷೆ ಕಲಿಸುವ ವಿಧಾನ

- o O o -

www.prepp.in

SPACE FOR ROUGH WORK

**ಕೆಳಗೆ ಕಾಣಿಸಿರುವ ಸೂಚನೆಗಳನ್ನು ಗಮನವಿಟ್ಟು ಓದಿರಿ :**

1. ಕೇಳಲಾಗಿರುವ ಪ್ರಶ್ನೆಗಳಿಗೆ ಉತ್ತರಿಸಬೇಕಾದ ವಿಧಾನವನ್ನು ಕೊಡಲಾಗಿರುವ ಪ್ರಶ್ನೆಪತ್ರಿಕೆಯಲ್ಲಿ ಸ್ಪಷ್ಟವಾಗಿ ಸೂಚಿಸಲಾಗಿದೆ, ಉತ್ತರಿಸುವ ಮುನ್ನ ಸೂಚನೆಗಳನ್ನು ಸರಿಯಾಗಿ ಓದಿ ಅರ್ಥ ಮಾಡಿಕೊಳ್ಳಬೇಕು.
2. ಪ್ರತಿಯೊಂದು ಪ್ರಶ್ನೆಗೆ 4 ವಿಕಲ್ಪ ಉತ್ತರಗಳನ್ನು ಕೊಡಲಾಗಿದೆ. (OMR) ಉತ್ತರ ಪತ್ರಿಕೆಯ **ಪುಟ–2** ರಲ್ಲಿ ಕೇವಲ ಒಂದು ವೃತ್ತವನ್ನು ಮಾತ್ರ **ಕಪ್ಪು/ನೀಲಿ ಬಾಲ್ ಪಾಯಿಂಟ್ ಪೆನ್** ನಿಂದ ತುಂಬಿಸಬೇಕು. ಒಂದು ಬಾರಿ ಉತ್ತರ ನಮೂದಿಸಿದ ಮೇಲೆ ಬದಲಾಯಿಸಲು ಸಾಧ್ಯವಿಲ್ಲ.
3. ಉತ್ತರ ಪತ್ರಿಕೆ ಮಡಚಬಾರದು, ಈ ಬಗ್ಗೆ ಪರೀಕ್ಷಾರ್ಥಿ ಎಚ್ಚರಿಕೆ ವಹಿಸಬೇಕು, ಉತ್ತರ ಪತ್ರಿಕೆಯ ಮೇಲೆ ಬೇರೆ ಯಾವುದೇ ಗುರುತು ಬೀಳಬಾರದು. ಪರೀಕ್ಷಾರ್ಥಿ ತನ್ನ ಅನುಕ್ರಮಣಿಕೆ ಸಂಖ್ಯೆಯನ್ನು ಉತ್ತರ ಪತ್ರಿಕೆಯಲ್ಲಿ ನಿರ್ಧಾರಿತವಾದ ಸ್ಥಳವಲ್ಲದೇ ಬೇರೆ ಎಲ್ಲಿಯೂ ಬರೆಯಬಾರದು.
4. ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಗಳನ್ನು ಎಚ್ಚರಿಕೆಯಿಂದ ಉಪಯೋಗಿಸಿ, ಯಾಕೆಂದರೆ ಯಾವುದೇ ಪರಿಸ್ಥಿತಿಯಲ್ಲಿ (ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಯ ಕೋಡ್ ಅಥವಾ ಸಂಖ್ಯೆ ಬೇರೆ ಬೇರೆಯಾಗಿರುವ ಸ್ಥಿತಿಯನ್ನು ಹೊರತುಪಡಿಸಿ) ಬೇರೆ ಪ್ರಶ್ನೆ ಪತ್ರಿಕೆ ಕೊಡಲಾಗುವುದಿಲ್ಲ.
5. ಪ್ರಶ್ನೆ ಪತ್ರಿಕೆ/ಉತ್ತರ ಪತ್ರಿಕೆಯಲ್ಲಿ ಕೊಟ್ಟಿರುವ ಪ್ರಶ್ನೆಪತ್ರಿಕೆಯ ಸಂಕೇತ ಮತ್ತು ಸಂಖ್ಯೆಯನ್ನು ಪರೀಕ್ಷಾರ್ಥಿಯು ಹಾಜರಿ ಪತ್ರದಲ್ಲಿ ಸರಿಯಾಗಿ ಬರೆಯಬೇಕು (Attendance Sheet).
6. OMR ಉತ್ತರಪತ್ರಿಕೆಯಲ್ಲಿ ಸಂಕೇತಿಸಿದ ಮಾಹಿತಿಗಳನ್ನು ಗಣಕಯಂತ್ರವು ಓದುತ್ತದೆ. ಆದ್ದರಿಂದ ಯಾವುದೇ ಮಾಹಿತಿಗಳನ್ನು ಅಪೂರ್ಣಗೊಳಿಸಕೂಡದು ಮತ್ತು ಪ್ರವೇಶಪತ್ರದಲ್ಲಿರುವ ಮಾಹಿತಿಗೆ ಅದು ಭಿನ್ನವಾಗಬಾರದು.
7. ಪರೀಕ್ಷಾರ್ಥಿಯು, ಪರೀಕ್ಷಾ ಹಾಲ್/ಕೋಣೆಯಲ್ಲಿ ಪ್ರವೇಶ ಕಾರ್ಡ್ ಅಲ್ಲದೇ ಬೇರೆ ಯಾವ ರೀತಿಯ ಪಠ್ಯಸಾಮಗ್ರಿ, ಮುದ್ರಿತ ಅಥವಾ ಕೈಯಲ್ಲಿ ಬರೆದ, ಕಾಗದದ ಚೀಟಿಗಳು, ಪೇಜರ್, ಮೊಬೈಲ್ ಫೋನು, ಇಲೆಕ್ಟ್ರಾನಿಕ್ ಉಪಕರಣಗಳು ಅಥವಾ ಬೇರೆ ಪ್ರಕಾರದ ಸಾಮಗ್ರಿಗಳನ್ನು ತರುವುದು ಅಥವಾ ಉಪಯೋಗ ಮಾಡಲು ಅನುಮತಿ ಇಲ್ಲ.
8. ಪರೀಕ್ಷಾ ಕೊಠಡಿಯೊಳಗೆ ಮೊಬೈಲ್ ಫೋನ್, ವೈರ್‌ಲೆಸ್ ಸಂಪರ್ಕ ಉಪಕರಣಗಳನ್ನು ಮತ್ತಿತರ ನಿಷೇಧಿತ ವಸ್ತುಗಳನ್ನು ತರಬಾರದು, ಇದನ್ನು ಮೀರಿ ನಡೆದಲ್ಲಿ ಅಥವಾ ಉಲ್ಲಂಘಿಸಿದರೆ ಆ ಅಭ್ಯರ್ಥಿಗಳು ಶಿಕ್ಷಾರ್ಹರಾಗುತ್ತಾರೆ ಮತ್ತು ಅವರನ್ನು ಪರೀಕ್ಷೆಯಿಂದ ಹೊರಹಾಕಲೂಬಹುದು.
9. ಕೇಳಿದಾಗ, ಪ್ರತಿಯೊಬ್ಬ ಪರೀಕ್ಷಾರ್ಥಿ ತನ್ನ ಪ್ರವೇಶ ಕಾರ್ಡ್‌ನ್ನು ನಿರೀಕ್ಷಕರಿಗೆ ತೋರಿಸಬೇಕು.
10. ಅಧೀಕ್ಷಕರು ಅಥವಾ ನಿರೀಕ್ಷಕರ ವಿಶೇಷ ಅನುಮತಿ ಇಲ್ಲದೇ ಯಾರೇ ಪರೀಕ್ಷಾರ್ಥಿ ತನ್ನ ಸ್ಥಾನವನ್ನು ಬಿಡಬಾರದು.
11. ಕಾರ್ಯನಿರತ ನಿರೀಕ್ಷಕರಿಗೆ ತನ್ನ ಉತ್ತರ ಪತ್ರಿಕೆ ಕೊಡದೇ ಹಾಗೂ ಹಾಜರಿ ಪತ್ರದಲ್ಲಿ ಎರಡು ಬಾರಿ ಸಹಿ ಹಾಕದೇ ಯಾವ ಪರೀಕ್ಷಾರ್ಥಿಯೂ ಪರೀಕ್ಷಾ ಹಾಲ್‌ನಿಂದ ಹೊರಗೆ ಹೋಗಬಾರದು. ಹಾಗೊಂದು ವೇಳೆ ಪರೀಕ್ಷಾರ್ಥಿ ಎರಡನೇ ಬಾರಿ ಹಾಜರಿ ಪತ್ರದಲ್ಲಿ ಸಹಿ ಮಾಡದೇ ಇದ್ದರೆ, ಆ ವ್ಯಕ್ತಿ, ಉತ್ತರ ಪತ್ರಿಕೆ ಹಿಂದೆ ಕೊಟ್ಟಿಲ್ಲ ಮತ್ತು ಇದು ಅನುಚಿತ ಸಾಧನ ಬಳಕೆಯ ಪ್ರಕರಣ ಎಂದು ತಿಳಿದು ಸೂಕ್ತ ಕ್ರಮ ಕೈಗೊಳ್ಳಲಾಗುವುದು. **ಪರೀಕ್ಷಾರ್ಥಿಗಳು ತಮ್ಮ ಎಡಗೈಯ ಹೆಬ್ಬೆಟ್ಟಿನ ಗುರುತನ್ನು ಹಾಜರಿ ಪತ್ರದಲ್ಲಿ ಕೊಟ್ಟಿರುವ ಸ್ಥಳದಲ್ಲಿ ಹಾಕಬೇಕು.**
12. ಇಲೆಕ್ಟ್ರಾನಿಕ್/ಹಸ್ತ ಚಾಲನೆಯ ಗಣಕಯಂತ್ರ (Calculator) ಉಪಯೋಗ ನಿಷೇಧಿಸಲಾಗಿದೆ.
13. ಪರೀಕ್ಷಾ ಹಾಲ್‌ನಲ್ಲಿ, ಪರೀಕ್ಷಾರ್ಥಿ ಬೋರ್ಡ್‌ನ ಎಲ್ಲಾ ನೀತಿ–ನಿಯಮಾವಳಿಗಳ ಪಾಲನೆಗಾಗಿ ಬದ್ಧನಾಗಿರುತ್ತಾರೆ. ಅನುಚಿತ ಸಾಧನಗಳ ಎಲ್ಲಾ ಪ್ರಕರಣಗಳನ್ನು ಬೋರ್ಡ್‌ನ ನೀತಿ–ನಿಯಮಾವಳಿಗಳ ಅನುಸಾರ ನಿರ್ಧರಿಸಲಾಗುವುದು.
14. ಎಂತಹುದೇ ಪರಿಸ್ಥಿತಿಯಲ್ಲಿ ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಯ ಯಾವುದೇ ಭಾಗವನ್ನು ಬೇರೆ ಮಾಡಬಾರದು.
15. **ಪರೀಕ್ಷೆ ಮುಗಿದ ನಂತರ, ಪರೀಕ್ಷಾರ್ಥಿ, ಪರೀಕ್ಷಾ ಹಾಲ್/ಕೋಣೆಯಿಂದ ಹೊರಗೆ ಬರುವ ಮೊದಲು, ನಿರೀಕ್ಷಕರಿಗೆ ಉತ್ತರ ಪತ್ರಿಕೆಯನ್ನು ತಪ್ಪದೇ ಒಪ್ಪಿಸಬೇಕು. ಪರೀಕ್ಷಾರ್ಥಿ ಪ್ರಶ್ನೆ ಪತ್ರಿಕೆಯನ್ನು ತಮ್ಮೊಂದಿಗೆ ತೆಗೆದುಕೊಂಡು ಹೋಗಬಹುದು.**

# निम्नलिखित निर्देशों को ध्यान से पढ़ें :

1. जिस प्रकार से विभिन्न प्रश्नों के उत्तर दिए जाने हैं उसका वर्णन परीक्षा पुस्तिका में किया गया है, जिसे आप प्रश्नों का उत्तर देने से पहले ध्यान से पढ़ लें।
2. प्रत्येक प्रश्न के लिए दिए गए चार विकल्पों में से सही उत्तर के लिए OMR उत्तर पत्र के **पृष्ठ-2** पर केवल एक वृत्त को ही पूरी तरह **नीले/काले बॉल पॉइन्ट पेन** से भरें। एक बार उत्तर अंकित करने के बाद उसे बदला नहीं जा सकता है।
3. परीक्षार्थी सुनिश्चित करें कि इस उत्तर पत्र को मोड़ा न जाए एवं उस पर कोई अन्य निशान न लगाएँ। परीक्षार्थी अपना अनुक्रमांक उत्तर-पत्र में निर्धारित स्थान के अतिरिक्त अन्यत्र न लिखें।
4. परीक्षा पुस्तिका एवं उत्तर पत्र का ध्यानपूर्वक प्रयोग करें, क्योंकि किसी भी परिस्थिति में (केवल परीक्षा पुस्तिका एवं उत्तर पत्र के कोड या संख्या में भिन्नता की स्थिति को छोड़कर) दूसरी परीक्षा पुस्तिका उपलब्ध नहीं करायी जाएगी।
5. परीक्षा पुस्तिका/उत्तर पत्र में दिए गए परीक्षा पुस्तिका कोड व संख्या को परीक्षार्थी सही तरीके से उपस्थिति-पत्र में लिखें।
6. OMR उत्तर पत्र में कोडित जानकारी को एक मशीन पढ़ेगी। इसलिए कोई भी सूचना अधूरी न छोड़ें और यह प्रवेश-पत्र में दी गई सूचना से भिन्न नहीं होनी चाहिए।
7. परीक्षार्थी द्वारा परीक्षा हॉल/कक्ष में प्रवेश-पत्र के सिवाय किसी प्रकार की पाठ्य-सामग्री, मुद्रित या हस्तलिखित, कागज़ की पर्चियाँ, पेजर, मोबाइल फोन, इलेक्ट्रॉनिक उपकरण या किसी अन्य प्रकार की सामग्री को ले जाने या उपयोग करने की अनुमति नहीं है।
8. मोबाइल फोन, बेतार संचार युक्तियाँ (स्विच ऑफ अवस्था में भी) और अन्य प्रतिबंधित वस्तुएँ परीक्षा हॉल/कक्ष में नहीं लाई जानी चाहिए। इस सूचना का पालन न होने पर इसे परीक्षा में अनुचित साधनों का प्रयोग माना जाएगा और परीक्षार्थी विरुद्ध कार्यवाही की जाएगी, परीक्षा रद्द करने सहित।
9. पूछे जाने पर प्रत्येक परीक्षार्थी, निरीक्षक को अपना प्रवेश-पत्र दिखाएँ।
10. केन्द्र अधीक्षक या निरीक्षक की विशेष अनुमति के बिना कोई परीक्षार्थी अपना स्थान न छोड़ें।
11. कार्यरत निरीक्षक को अपना उत्तर पत्र दिए बिना एवं उपस्थिति-पत्र पर दुबारा हस्ताक्षर किए बिना परीक्षार्थी परीक्षा हॉल/कक्ष नहीं छोड़ेंगे। यदि किसी परीक्षार्थी ने दूसरी बार उपस्थिति-पत्र पर हस्ताक्षर नहीं किए, तो यह माना जाएगा कि उसने उत्तर पत्र नहीं लौटाया है और यह अनुचित साधन का मामला माना जाएगा। **परीक्षार्थी अपने बाएँ हाथ के अंगूठे का निशान उपस्थिति-पत्र में दिए गए स्थान पर अवश्य लगाएँ।**
12. इलेक्ट्रॉनिक/हस्तचालित परिकलक का उपयोग वर्जित है।
13. परीक्षा हॉल/कक्ष में आचरण के लिए परीक्षार्थी परीक्षण संस्था के सभी नियमों एवं विनियमों द्वारा नियमित हैं। अनुचित साधनों के सभी मामलों का फैसला परीक्षण संस्था के नियमों एवं विनियमों के अनुसार होगा।
14. किसी भी परिस्थिति में परीक्षा पुस्तिका और उत्तर पत्र का कोई भाग अलग न करें।
15. **परीक्षा सम्पन्न होने पर, परीक्षार्थी हॉल/कक्ष छोड़ने से पूर्व उत्तर पत्र निरीक्षक को अवश्य सौंप दें।** ***परीक्षार्थी अपने साथ इस परीक्षा पुस्तिका को ले जा सकते हैं।***

# READ THE FOLLOWING INSTRUCTIONS CAREFULLY :

1. The manner in which the different questions are to be answered has been explained in the Test Booklet which you should read carefully before actually answering the questions.
2. Out of the four alternatives for each question, only one circle for the correct answer is to be darkened completely with **Blue / Black Ball Point Pen** on **Side-2** of the OMR Answer Sheet. The answer once marked is not liable to be changed.
3. The candidates should ensure that the Answer Sheet is not folded. Do not make any stray marks on the Answer Sheet. Do not write your Roll No. anywhere else except in the specified space in the Answer Sheet.
4. Handle the Test Booklet and Answer Sheet with care, as under no circumstances (except for discrepancy in Test Booklet Code or Number and Answer Sheet Code or Number), another set will be provided.
5. The candidates will write the correct Test Booklet Code and Number as given in the Test Booklet/Answer Sheet in the Attendance Sheet.
6. A machine will read the coded information in the OMR Answer Sheet. Hence, no information should be left incomplete and it should not be different from the information given in the Admit Card.
7. Candidates are not allowed to carry any textual material, printed or written, bits of papers, pager, mobile phone, electronic device or any other material except the Admit Card inside the examination hall/room.
8. Mobile phones, wireless communication devices (even in switched off mode) and the other banned items should not be brought in the examination halls/rooms. Failing to comply with this instruction, it will be considered as using unfair means in the examination and action will be taken against the candidate including cancellation of examination.
9. Each candidate must show on demand his/her Admit Card to the Invigilator.
10. No candidate, without special permission of the Centre Superintendent or Invigilator, should leave his/her seat.
11. The candidates should not leave the Examination Hall/Room without handing over their Answer Sheet to the Invigilator on duty and sign the Attendance Sheet twice. Cases where candidate has not signed the Attendance Sheet second time will be deemed not to have handed over the Answer Sheet and dealt with as an unfair means case. **The candidates are also required to put their left hand THUMB impression in the space provided in the Attendance Sheet.**
12. Use of Electronic/Manual Calculator is prohibited.
13. The candidates are governed by all Rules and Regulations of the Examining Body with regard to their conduct in the Examination Hall/Room. All cases of unfair means will be dealt with as per Rules and Regulations of the Examining Body.
14. No part of the Test Booklet and Answer Sheet shall be detached under any circumstances.
15. **On completion of the test, the candidate must hand over the Answer Sheet to the Invigilator in the Hall / Room.** ***The candidates are allowed to take away this Test Booklet with them.***